ಸಮಾಪನೆಯಲ್ಲಿರುವ ವ್ಯವಸಾಯ ಸೇವಾ ಸಹಕಾರ ಸಂಘ ನಿ.,ಹರೀಷಿ ಸೊರಬ ತಾಲ್ಲೂಕು ಈ ಸಹಕಾರ ಸಂಘವು ನೊಂದಣಿ ಸಂ:–ಎಅರ್–25/1326/1976–77 ದಿನಾಂಕ:14–09–1976ರಂದು ನೊಂದಣಿಯಾಗಿರುತ್ತದೆ. ಸಂಘದ ಕಾರ್ಯವ್ಯಾಪ್ತಿಯು ತಾಲ್ಲೂಕಿಗಿಂತ ಕಡಿಮೆ ವ್ಯಾಪ್ತಿಗೆ ಸೀಮಿತವಾಗಿರುತ್ತದೆ. ಸಹಕಾರ ಸಂಘವು ಉಪನಿಯಮಗಳ ಉದ್ದೇಶಗಳಿಗನುಗುಣವಾಗಿ ಕಾರ್ಯನಿರ್ವಹಿಸದೇ ಸ್ಥಗಿತಗೊಂಡ ಕಾರಣ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಸಾಗರರವರ ಶಿಫಾರಸ್ಸಿನ ಮೇರೆಗೆ ಉಲ್ಲೇಖ(1)ರ ಈ ಕಛೇರಿಯ ದಿನಾಂಕ:–30–09–1994 ರ ಆದೇಶದಲ್ಲಿ ಈ ಸಂಘವನ್ನು ಸಮಾಪನೆಗೊಳಿಸಲಾಗಿತ್ತು. ಸಮಾಪನಾಧಿಕಾರಿಯಾಗಿ ನೇಮಿಸಲಾದ ಮೇಲ್ವಿಚಾರಕರು ಶಿವಮೊಗ್ಗ ಡಿಸಿಸಿ ಬ್ಯಾಂಕ್ ನಿ, ಸೊರಬ ಶಾಖೆ ಇವರು ದಿನಾಂಕ:13–07–1995ರಂದು ಪ್ರಭಾರ ಪಡೆದು ಸಮಾಪನಾ ಕಾರ್ಯಕೈಗೊಂಡಿರುತ್ತಾರೆ. ನಂತರ ಈ ಕಚೇರಿಯ ದಿನಾಂಕ:–06–09–2006 ರ ಆದೇಶದಲ್ಲಿ ಸಮಾಪನಾಧಿಕಾರಿಯಾಗಿ ಸಹಕಾರ ಅಭಿವೃದ್ಧಿ ಸೊರಬರವರಿಗೆ ನೇಮಿಸಿದೆ. ಸಮಾಪನಾಧಿಕಾರಿಯು ದಿನಾಂಕ:03–04–2012ರಂದು ನಡೆದ ಸಮಾಪನಾಧಿಕಾರಿಯ ಅಂತಿಮ ಸಭೆಯಲ್ಲಿ ಈ ಕಚೇರಿಯ ಆದೇಶದಲ್ಲಿ ಪಡೆದ ಅನುಮೋದನೆಯಂತೆ ಸಂಘದ ಆಸ್ತಿ–ಜವಾಬ್ದಾರಿಯನ್ನು ವಿಲೇವಾರಿ ಮಾಡಿ ಆಸ್ತಿ–ಜವಾಬ್ದಾರಿ ತ:ಖ್ತೆಯನ್ನು ಶೂನ್ಯಗೊಳಿಸಿರುತ್ತಾರೆ. ಮತ್ತು ಸಂಘದ ನೊಂದಣಿ ಕ್ರಮಾಂಕವನ್ನು ರದ್ದುಪಡಿಸಲು ತೀರ್ಮಾನಿಸಿ, ಪ್ರಸ್ತಾವನೆಯನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಸಾಗರರವರಿಗೆ ಸಲ್ಲಿಸಿರುತ್ತಾರೆ. ಸಹಕಾರ ಸಂಘಗಳ ಸಹಾಯಕ ನಿಬಂಧಕರು ಸಾಗರರವರು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ನೊಂದಣಿ ರದ್ದುಪಡಿಸಲು ಉಲ್ಲೇಖ(2) ರ ಪತ್ರದೊಂದಿಗೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಈ ಕಚೇರಿಗೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದೆ, ದಿನಾಂಕ:03–04–2012ರಂದು ನಡೆದ ಸಮಾಪನಾಧಿಕಾರಿ ಸಭೆಯ ನಡವಳಿಯಂತೆ ದಿನಾಂಕ:31–03–2011 ಕ್ಕೆ ಇದ್ದಂತೆ ಸಂಘದ ಆಸ್ತಿ–ಜವಾಬ್ದಾರಿ ತ:ಖ್ತೆಯಂತೆ ವಿಲೇವಾರಿ ಮಾಡಿರುತ್ತಾರೆ. ಮತ್ತು ದಿನಾಂಕ:03–04–2012 ಕ್ಕೆ ಇದ್ದಂತೆ ಆಸ್ತಿ–ಜವಾಬ್ದಾರಿಯನ್ನು ಶೂನ್ಯಗೊಳಿಸಿರುತ್ತಾರೆ. ದಿನಾಂಕ:03–04–2012ರ ಸಮಾಪನಾಧಿಕಾರಿಯ ಅಂತಿಮ ಸಭೆಯ ನಿರ್ಣಯವನ್ನು ಅಂಗೀಕರಿಸಿ, ಸಹಕಾರ ಸಂಘದ ಆಸ್ತಿ–ಜವಾಬ್ದಾರಿಗಳು ಶೂನ್ಯಗೊಳಿಸಿರುವ ಮೇರೆಗೆ ಸಂಘವನ್ನು ಮುಂದುವರೆಸುವುದರಿಂದ ಈ ಸಹಕಾರ ಸಂಘದಿಂದ ಸದಸ್ಯರಿಗಾಗಲಿ, ಸಾರ್ವಜನಿಕರಿಗಾಗಲಿ ಯಾವುದೇ ಪ್ರಯೋಜನವಿಲ್ಲ ಎಂಬುದನ್ನು ಮನಗಂಡು ಈ ಸಂಘದ ನೊಂದಣಿ ಕ್ರಮಾಂಕವನ್ನು ರದ್ದುಪಡಿಸುವುದು ಸೂಕ್ತವೆಂದು ಪರಿಗಣಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ನಂ.ಡಿಆರ್ಎಸ್/ಎಲ್ಕ್ಯೂಡಿ/51/1993–94. ದಿನಾಂಕ:27–02–2013.

ಆದೇಶ

ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 75 ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಒ 139 ಸಿಎಲ್ಎಂ 2011 ದಿನಾಂಕ:17–02–2011 ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, **ಅಶೋಕ. ವೆಂ.ಮೊರಬ. ಸಹಕಾರ ಸಂಘಗಳ ಉಪನಿಬಂಧಕರು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ** ಆದ ನಾನು ಸಮಾಪನೆಯಲ್ಲಿರುವ ವ್ಯವಸಾಯ ಸೇವಾ ಸಹಕಾರ ಸಂಘ ನಿ.,ಹರೀಷಿ ಸೊರಬ ತಾಲ್ಲೂಕುಈ ಸಹಕಾರ ಸಂಘದ ನೊಂದಣಿ ಸಂ:–ಎಅರ್–25/1326/1976–77 ದಿನಾಂಕ:14–09–1976ನ್ನು ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಿ, ಆದೇಶ ಹೊರಡಿಸಿರುತ್ತೇನೆ.

ಈ ಆದೇಶದ ದಿನಾಂಕದಿಂದ ಸಂಘವು ಸಂಪೂರ್ಣವಾಗಿ ತನ್ನ ಅಸ್ತಿತ್ವವನ್ನು ಕಳೆದುಕೊಂಡು ವಿಸರ್ಜಿತವಾಗಿದೆ ಎಂದು ಪರಿಗಣಿಸತಕ್ಕದ್ದು. ಈ ಸಹಕಾರ ಸಂಘಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 33 ರನ್ವಯ 3 ವರ್ಷಗಳ ಕಾಲ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಸಾಗರ ಉಪ ವಿಭಾಗ ಸಾಗರ ಇವರ ಕಾರ್ಯಾಲಯದಲ್ಲಿ ಕಾಯ್ದಿರಿಸತಕ್ಕದು.

ಈ ಆದೇಶವನ್ನು ನನ್ನ ಸಹಿ ಮತ್ತು ಕಛೇರಿ ಮೊಹರಿನೊಂದಿಗೆ ದಿನಾಂಕ:27–02–2013. ರಂದು ನೀಡಲಾಗಿದೆ.

ಅಶೋಕ ವೆಂ.ಮೊರಬ
ಸಹಕಾರ ಸಂಘಗಳ ಉಪ–ನಿಬಂಧಕರು,
ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

PR.2105

ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿ ಶಿವಮೊಗ್ಗ ಜಿಲ್ಲೆ, ಸಹಕಾರ ಭವನ ಆರ್‌ಟಿಓ ಕಚೇರಿ ರಸ್ತೆ ಶಿವಮೊಗ್ಗ

ವಿಷಯ:– ಸಮಾಪನೆಯಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘ (ನಿ) ಮುಟಗುಪ್ಪೆ, ಸೊರಬ ತಾಲ್ಲೂಕು ಇದರ ನೊಂದಣಿ ಕ್ರಮಾಂಕ ರದ್ದುಪಡಿಸುವ ಬಗ್ಗೆ.

ಉಲ್ಲೇಖ:– 1) ಈ ಕಚೇರಿಯ ಆದೇಶ ಸಂ:–ಡಿಅರ್ಎಸ್/ಎಲ್ಕ್ಯೂಡಿ/ ಡಿಎಲ್ಎಸ್/ ಸಿಆರ್–14/2011–12 ದಿನಾಂಕ:31–10–2011.

2) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಸಾಗರ ಉಪವಿಭಾಗ ಸಾಗರರವರ ಪತ್ರ ನಂ:ಎಆರ್–25/ಎಲ್ಕ್ಯೂಡಿ/ ಸಿಆರ್– /2012–13 ದಿನಾಂಕ:16–03–2013.

3) ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಒ 139 ಸಿಎಲ್ಎಂ 2011 ದಿನಾಂಕ:17–02–2011

ಪ್ರಸ್ತಾವನೆ:–

ಸಮಾಪನೆಯಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘ (ನಿ) ಮುಟಗುಪ್ಪೆ, ಸೊರಬ ತಾಲ್ಲೂಕು ಈ ಸಹಕಾರ ಸಂಘವು ಸಹಕಾರ ಸಂಘಗಳ ಸಹಾಯಕ ನಿಬಂಧಕರು ಸಾಗರ ಉಪವಿಭಾಗ ಸಾಗರರವರ ಆದೇಶ ಸಂಖ್ಯೆ–ಎಅರ್–25/ಎಂಕೆಟಿ/ನೋಂದಣಿ/18522/1990–91 ದಿನಾಂಕ:31–01–1991 ರಂದು ನೊಂದಣಿಯಾಗಿರುತ್ತದೆ. ಸಂಘದ ಕಾರ್ಯವ್ಯಾಪ್ತಿಯು ತಾಲ್ಲೂಕಿಗಿಂತ ಕಡಿಮೆ ವ್ಯಾಪ್ತಿಗೆ ಸೀಮಿತವಾಗಿರುತ್ತದೆ. ಸಹಕಾರ ಸಂಘವು ಉಪನಿಯಮಗಳ ಉದ್ದೇಶಗಳಿಗನುಗುಣವಾಗಿ ಕಾರ್ಯನಿರ್ವಹಿಸದೇ ಸ್ಥಗಿತಗೊಂಡ ಕಾರಣ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಸಾಗರರವರ ಶಿಫಾರಸ್ಸಿನ ಮೇರೆಗೆ ಉಲ್ಲೇಖ(1)ರ ಈ ಕಛೇರಿಯ ಆದೇಶದಲ್ಲಿ ಈ ಸಂಘವನ್ನು ಸಮಾಪನೆಗೊಳಿಸಲಾಗಿತ್ತು. ಸಮಾಪನಾಧಿಕಾರಿಯಾಗಿ ನೇಮಿಸಲಾದ ಸಹಕಾರ ಅಭಿವೃದ್ಧಿ ಅಧಿಕಾರಿ ಸೊರಬ ಇವರು ದಿನಾಂಕ:15–11–2011 ರಂದು ಪ್ರಭಾರ ಪಡೆದು ಸಮಾಪನಾ ಕಾರ್ಯ ಕೈಗೊಂಡಿರುತ್ತಾರೆ. ಸಮಾಪನಾಧಿಕಾರಿಯು ದಿನಾಂಕ:28–02–2013 ರಂದು ನಡೆದ ಸಮಾಪನಾಧಿಕಾರಿಯ ಅಂತಿಮ ಸಭೆಯಲ್ಲಿ ಈ ಕಚೇರಿಯ ಆದೇಶದಲ್ಲಿ ಪಡೆದ ಅನುಮೋದನೆಯಂತೆ ಸಂಘದ ಆಸ್ತಿ–ಜವಾಬ್ದಾರಿಯನ್ನು ವಿಲೇವಾರಿ ಮಾಡಿ ಆಸ್ತಿ–ಜವಾಬ್ದಾರಿ ತ:ಖ್ತೆಯನ್ನು ಶೂನ್ಯಗೊಳಿಸಿರುತ್ತಾರೆ. ಮತ್ತು ಸಂಘದ ನೊಂದಣಿ ಕ್ರಮಾಂಕವನ್ನು

ರದ್ದುಪಡಿಸಲು ತೀರ್ಮಾನಿಸಿ, ಪ್ರಸ್ತಾವನೆಯನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಸಾಗರರವರಿಗೆ ಸಲ್ಲಿಸಿರುತ್ತಾರೆ. ಸಹಕಾರ ಸಂಘಗಳ ಸಹಾಯಕ ನಿಬಂಧಕರು ಸಾಗರರವರು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ನೊಂದಣಿ ರದ್ದುಪಡಿಸಲು ಉಲ್ಲೇಖ(2) ರ ಪತ್ರದೊಂದಿಗೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಈ ಕಚೇರಿಗೆ ಸಲ್ಲಿಸಿರುತ್ತಾರೆ

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದೆ, ದಿನಾಂಕ:28-02-2013 ರಂದು ನಡೆದ ಸಮಾಪನಾಧಿಕಾರಿ ಸಭೆಯ ನಡವಳಿಯಂತೆ ದಿನಾಂಕ:31-03-2011 ಕ್ಕೆ ಇದ್ದಂತೆ ಸಂಘದ ಆಸ್ತಿ-ಜವಾಬ್ದಾರಿ ತ:ಖ್ತೆಯಂತೆ ವಿಲೇವಾರಿ ಮಾಡಿರುತ್ತಾರೆ. ಮತ್ತು ದಿನಾಂಕ:28-02-2013 ಕ್ಕೆ ಇದ್ದಂತೆ ಆಸ್ತಿ-ಜವಾಬ್ದಾರಿಯನ್ನು ಶೂನ್ಯಗೊಳಿಸಿರುತ್ತಾರೆ. ದಿನಾಂಕ:28-02-2012ರ ಸಮಾಪನಾಧಿಕಾರಿಯ ಅಂತಿಮ ಸಭೆಯ ನಿರ್ಣಯವನ್ನು ಅಂಗೀಕರಿಸಿ, ಸಹಕಾರ ಸಂಘದ ಆಸ್ತಿ-ಜವಾಬ್ದಾರಿಗಳು ಶೂನ್ಯಗೊಳಿಸಿರುವ ಮೇರೆಗೆ ಸಂಘವನ್ನು ಮುಂದುವರೆಸುವುದರಿಂದ ಈ ಸಹಕಾರ ಸಂಘದಿಂದ ಸದಸ್ಯರಿಗಾಗಲಿ, ಸಾರ್ವಜನಿಕರಿಗಾಗಲಿ ಯಾವುದೇ ಪ್ರಯೋಜನವಿಲ್ಲ ಎಂಬುದನ್ನು ಮನಗಂಡು ಈ ಸಂಘದ ನೊಂದಣಿ ಕ್ರಮಾಂಕವನ್ನು ರದ್ದುಪಡಿಸುವುದು ಸೂಕ್ತವೆಂದು ಪರಿಗಣಿಸಿ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸಂಖ್ಯೆ:ಡಿಆರ್‌ಎಸ್/ಎಲ್‌ಕ್ಯೂಡಿ/ಡಿಎಲ್‌ಎಸ್/ಸಿಆರ್-14/2011-12 ದಿನಾಂಕ:30-03-2013.

ಆದೇಶ

ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 75 ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಒ 139 ಸಿಎಲ್‌ಎಂ 2011 ದಿನಾಂಕ:17-02-2011 ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, **ಅಶೋಕ. ವೆಂ.ಮೊರಬ. ಸಹಕಾರ ಸಂಘಗಳ ಉಪನಿಬಂಧಕರು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ** ಆದ ನಾನು ಸಮಾಪನೆಯಲ್ಲಿರುವ **ಹಾಲು ಉತ್ಪಾದಕರ ಸಹಕಾರ ಸಂಘ (ನಿ) ಮುಟಗುಪ್ಪೆ, ಸೊರಬ ತಾಲ್ಲೂಕು**ಈ ಸಹಕಾರ ಸಂಘದ ಸಂಖ್ಯೆ-ಎಆರ್-25/ ಎಂಕೆಟಿ/ ನೋಂದಣಿ /18522/1990-91 ದಿನಾಂಕ: 31-01-1991ನ್ನು ಕೂಡಲೇ ಜಾರಿಗೆ ಬರುವಂತೆ ರದ್ದುಪಡಿಸಿ, ಆದೇಶ ಹೊರಡಿಸಿರುತ್ತೇನೆ.

ಈ ಆದೇಶದ ದಿನಾಂಕದಿಂದ ಸಂಘವು ಸಂಪೂರ್ಣವಾಗಿ ತನ್ನ ಅಸ್ತಿತ್ವವನ್ನು ಕಳೆದುಕೊಂಡು ವಿಸರ್ಜಿತವಾಗಿದೆ ಎಂದು ಪರಿಗಣಿಸತಕ್ಕದ್ದು. ಈ ಸಹಕಾರ ಸಂಘಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 33 ರನ್ವಯ 3 ವರ್ಷಗಳ ಕಾಲ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಸಾಗರ ಉಪ ವಿಭಾಗ ಸಾಗರ ಇವರ ಕಾರ್ಯಾಲಯದಲ್ಲಿ ಕಾಯ್ದಿರಿಸತಕ್ಕದು.

ಈ ಆದೇಶವನ್ನು ನನ್ನ ಸಹಿ ಮತ್ತು ಕಛೇರಿ ಮೊಹರಿನೊಂದಿಗೆ ದಿನಾಂಕ:30-03-2013. ರಂದು ನೀಡಲಾಗಿದೆ.

ಅಶೋಕ ವೆಂ.ಮೊರಬ
ಸಹಕಾರ ಸಂಘಗಳ ಉಪ-ನಿಬಂಧಕರು,
ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

PR.2104

ಸಹಕಾರ ಸಂಘಗಳ ಉಪನಿಬಂಧಕರು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಇವರ ನ್ಯಾಯಾಲಯದಲ್ಲಿ

ದಾವಾಸಂಖ್ಯೆ:ಡಿಆರ್‌ಎಸ್/ಡಿಡಿಎಸ್/ಎಂಐಎಸ್‌ಸಿ/02/2012-13

ಅರ್ಜಿದಾರರು:	ವಿರುದ್ಧ	**ಎದುರು ಅರ್ಜಿದಾರರು:**
ಶಿವಮೊಗ್ಗ ತಾಲ್ಲೂಕು ಗೋರ್‌ಬಾಯಿ ಪತ್ತಿನಸಹಕಾರ ಸಂಘ ನಿ, ಡಿ-7, ಸೂಡಾ ಕಾಂಪ್ಲೆಕ್ಸ್, ವಿನೋಬನಗರ, ಶಿವಮೊಗ್ಗ.		1.ಜಿ.ಲಕ್ಷ್ಮೀಪತಿ, ಮಾಜಿ ಕಾರ್ಯದರ್ಶಿ, ಶಿವಮೊಗ್ಗ ತಾಲ್ಲೂಕು ಗೋರ್‌ಬಾಯಿ ಪತ್ತಿನ ಸಹಕಾರ ಸಂಘ ನಿ, ಶಿವಮೊಗ್ಗ. **ವಾಸ:** ಜಿ.ಲಕ್ಷ್ಮೀಪತಿ, ಬಿನ್ ಕೆ.ಗಣೇಶ್‌ನಾಯ್ಕ್, ಮನೆ ನಂ.392, 3ನೇ ತಿರುವು, ಅಶ್ವಥನಗರ, ಆರ್ಚ್‌ಎಡಭಾಗ, ಎಲ್.ಬಿ.ಎಸ್.ನಗರ. ಸವಳಂಗ ರಸ್ತೆ, ಶಿವಮೊಗ್ಗ. 2. ಕೆ.ಗಣೇಶ್‌ನಾಯ್ಕ್ ಬಿನ್ ಕಾಳ್ಯಾನಾಯ್ಕ್, ನಿವೃತ್ತ ಶಿಕ್ಷಣ ಸಂಯೋಜಕರು, ಮನೆ ನಂ.392, 3ನೇ ತಿರುವು, ಅಶ್ವಥನಗರ, ಆರ್ಚ್‌ಎಡಭಾಗ, ಎಲ್.ಬಿ.ಎಸ್.ನಗರ. ಸವಳಂಗ ರಸ್ತೆ, ಶಿವಮೊಗ್ಗ.

ಉಪಸ್ಥಿತ ಅಧಿಕಾರಿಯ ಹೆಸರು ಮತ್ತು ಪದನಾಮ : ಅಶೋಕ.ವೆಂ.ಮೊರಬ, ಸಹಕಾರ ಸಂಘಗಳ ಉಪ ನಿಬಂಧಕರು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.
ದಿನಾಂಕ:22-03-2013

ತೀರ್ಪು

ಅರ್ಜಿದಾರ ಸಂಘ ಈ ನ್ಯಾಯಾಲಯದಲ್ಲಿ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70ರಡಿಯಲ್ಲಿ ಎದುರು ಅರ್ಜಿದಾರರು, ಅರ್ಜಿದಾರ ಸಂಘದಲ್ಲಿ ದುರುಪಯೋಗಪಡಿಸಿಕೊಂಡಿರುವ ಮೊಬಲಗು ರೂ.07,47,835-00ಗಳನ್ನು ಸಾಲಿಯಾನ ಶೇ.18ರ ಬಡ್ಡಿಯೊಂದಿಗೆ ವಸೂಲಾತಿಗಾಗಿ ಎದುರುದಾರರ ವಿರುದ್ದ ದಾವಾ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ಈ ದಾವಾ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಂಡು, ದಾವಾ ಅರ್ಜಿ ಸಂಖ್ಯೆ: ಡಿಆರ್‌ಎಸ್/ಡಿಡಿಎಸ್/ಎಂಐಎಸ್‌ಸಿ/02/2012-13 ಎಂದು ನಂಬರ್ ನೀಡಲಾಗಿದೆ. ಈ ದಾವಾ ಅರ್ಜಿಯೊಂದಿಗೆ ಅರ್ಜಿದಾರರು ಕಲಂ 103 ರನ್ವಯ ಅರ್ಜಿ ಸಲ್ಲಿಸಿ, ಅರ್ಜಿದಾರ ಸಂಘ, ಎದುರುದಾರರ ವಿರುದ್ದ ವಸೂಲಾತಿಗಾಗಿ ಕಾಯ್ದೆ ಕಲಂ 70ರಡಿಯಲ್ಲಿ ಅರ್ಜಿದಾರ ಸಂಘದ ಪರವಾಗಿ ಡಿಕ್ರಿ ಕೋರಿ

ಪ್ರಕರಣ ದಾಖಲಿಸಿದ್ದು, ಸದರಿ ಹಣವು ವಸೂಲಾತಿ ಆಗದಿರುವಂತಹ ಪರಿಸ್ಥಿತಿ ಇರುವ ಪ್ರಯುಕ್ತ ಮೇಲ್ಕಂಡ ದಾವಾ ಅರ್ಜಿಯಲ್ಲಿನ ಎದುರುದಾರರ ಸ್ಥಿರಾಸ್ತಿಯನ್ನು ದಾವಾ ಅರ್ಜಿಯಲ್ಲಿ ನೀಡಬಹುದಾದ ಡಿಕ್ರಿಯನ್ನು ನಿರರ್ಥಕಗೊಳಿಸುವ ಉದ್ದೇಶದಿಂದ ಬೇರೆಯವರಿಗೆ ಪರಬಾರೆ ಅಥವಾ ಮಾರಾಟ ಮಾಡುವ ಕ್ರಮವನ್ನು ಪ್ರತಿಬಂಧಿಸಲು ಸಹಕಾರ ಸಂಘಗಳ ಕಾಯ್ದೆ ಕಲಂ 103 ರಡಿಯಲ್ಲಿ ತೀರ್ಪು ಪೂರ್ವ ಜಪ್ತು ಕ್ರಮವನ್ನು ಕೋರಿದ್ದಾರೆ, ಈ ಕೋರಿಕೆ ಯುಕ್ತವಾಗಿದೆಯೆಂದು ಸ್ವತಃ ಈ ನ್ಯಾಯಾಲಯಕ್ಕೆ ಮನವರಿಕೆಯಾಗಿದ್ದ ಕಾರಣ ದಿನಾಂಕ:29-12-2012ರಂದು ತೀರ್ಪು ಪೂರ್ವ ಷರತ್ತುಬದ್ಧ ಜಪ್ತು ಆದೇಶದ ನೋಟೀಸನ್ನು ಹೊರಡಿಸಲಾಗಿದೆ. ಉಭಯ ಪಕ್ಷದವರಿಗೆ ದಿನಾಂಕ:22-01-2013ರಂದು ಅಪರಾಹ್ನ 3.30ಕ್ಕೆ ವಿಚಾರಣೆಗೆ ಹಾಜರಾಗಲು ತಿಳಿಸಿ ನೋಟೀಸ್ ನೀಡಲಾಗಿತ್ತು. 1ನೇ ಎದುರುದಾರರ ನೋಟೀಸ್ ಲಕೋಟೆ ಮೇಲೆ "Party left" ಎಂಬ ಷರಾದೊಂದಿಗೆ ವಾಪಸ್ಸು ಬಂದಿರುತ್ತದೆ. ಅರ್ಜಿದಾರರು ಮತ್ತು 2ನೇ ಎದುರು ಅರ್ಜಿದಾರರಿಗೆ ನೋಟೀಸ್ ಜಾರಿಯಾಗಿರುತ್ತದೆ. ಪ್ರಕರಣದ ವಿಚಾರಣೆಯಲ್ಲಿ ಅರ್ಜಿದಾರರು ಮತ್ತು 2ನೇ ಎದುರು ಅರ್ಜಿದಾರರು ಹಾಜರಾಗಿರುತ್ತಾರೆ. ದಿನಾಂಕ:29-12-2012 ರಿಂದ 22-03-2013 ರವರೆಗೆ ವಿಚಾರಣೆ ನಡೆದಿರುತ್ತದೆ. 2ನೇ ಎದುರು ಅರ್ಜಿದಾರರು ಹಣದುರುಪಯೋಗದ ಬಾಬ್ತಿನ ಮೊಬಲಗನ್ನು ಪಾವತಿಸಲು ಸಮಯಾವಕಾಶ ನೀಡಲು ಕೋರಿಕೆ ಸಲ್ಲಿಸಿರುತ್ತಾರೆ. ಅದರಂತೆ ಸಮಯಾವಕಾಶ ಕಲ್ಪಿಸಿದೆ, ಕಲ್ಪಿಸಿದ ಸಮಯಾವಕಾಶವನ್ನು ಸದರಿಯವರು ಸದುಪಯೋಗಿಸಿಕೊಂಡು ಈ ಕೆಳಕಂಡ ವಿವರಗಳಂತೆ ಸದರಿ ಬಾಬ್ತಿನ ಮೊಬಲಗನ್ನು ಪಾವತಿಸಿರುತ್ತಾರೆ. ಸದರಿ ಮೊಬಲಗನ್ನು ಪಾವತಿಸಿದ ಬಾಬ್ತಿನ ರಶೀದಿಗಳ ನಕಲನ್ನು ಹಾಜರ್ಪಡಿಸಿರುತ್ತಾರೆ.

ಕ್ರ.ಸಂ.	ರಶೀದಿ ಸಂಖ್ಯೆ	ದಿನಾಂಕ	ಮೊಬಲಗು (ರೂ.ಗಳಲ್ಲಿ)
1)	ಸಂ.4869	15-01-2013	186000-00
2)	ಸಂ.4880	06-02-2013	300000-00
3)	ಸಂ.4893	01-03-2013	261835-00
4)	ಸಂ.4905	12-03-2013	382619-00
	ಒಟ್ಟು		**1130454-00**

ದಿನಾಂಕ:22-03-2013ರಂದು ನಡೆದ ವಿಚಾರಣೆಯಲ್ಲಿ ಅರ್ಜಿದಾರರು ಮತ್ತು 2ನೇ ಎದುರು ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಮೆಮೋ ಒಂದನ್ನು ಸಲ್ಲಿಸಿ, ಈ ಮೇಲ್ಕಂಡ ವಿವರಗಳಂತೆ, 2ನೇ ಎದುರುದಾರರು ಸಂಘಕ್ಕೆ ಬರಬೇಕಾದ ಪೂರ್ಣ ಮೊಬಲಗನ್ನು ಪಾವತಿಸಿರುತ್ತಾರೆ. ಎದುರುದಾರರಿಂದ ಬರಲು ಯಾವುದೇ ಮೊಬಲಗು ಬಾಕಿರುವುದಿಲ್ಲ ಎಂದು ತಿಳಿಸಿ, ಈ ದಾವಾ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ. ಅದರಂತೆ, ಈ ಕೆಳಕಂಡ ಆದೇಶ.

: ಆ ದೇ ಶ :

ಸಂ:ಡಿಆರ್‌ಎಸ್/ಡಿಡಿಎಸ್/ಎಂಐಎಸ್‌ಸಿ/02/2012-13.ದಿನಾಂಕ:22-03-2013

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಗಾಗಿ ಅಶೋಕ.ವೆಂ.ಮೊರಬ, ಸಹಕಾರ ಸಂಘಗಳ ಉಪನಿಬಂಧಕರು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಆದ ನಾನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 103 ರನ್ವಯ ಮತ್ತು ಕರ್ನಾಟಕ ಸರ್ಕಾರದ ಅಧಿಸೂಚನೆ ಸಂ.ಸಿಓ/139/ಸಿಎಲ್‌ಎಂ/2010, ಬೆಂಗಳೂರು, ದಿನಾಂಕ:17-02-2011ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಈ ನ್ಯಾಯಾಲಯದ ಆದೇಶ ಸಂ.ಡಿಆರ್‌ಎಸ್/ಎಬಿಎನ್/ಕಲಂ-103/2012-13 ದಿನಾಂಕ:29-12-2012ರನ್ವಯ ಹೊರಡಿಸಿದ ಕಲಂ103ರ ಮೇರೆಗೆ ತೀರ್ಪು ಪೂರ್ವ ಷರತ್ತು ಪೂರ್ವಕ ಜಪ್ತು ಆದೇಶದ ಕ್ರಮವನ್ನು ಕೈಬಿಟ್ಟು, ಈ ಆದೇಶದೊಂದಿಗೆ ಇರುವ ಅನುಸೂಚಿಯಲ್ಲಿ ಕಾಣಿಸಿರುವ ಸ್ಥಿರಾಸ್ತಿಗಳನ್ನು ಮೇಲ್ಕಾಣಿಸಿದ ದಾವಾ ಅರ್ಜಿಯಲ್ಲಿನ ದಿನಾಂಕ:29-12-2012 ರಂದು ಹೊರಡಿಸಿದ ತೀರ್ಪು ಪೂರ್ವ ಜಪ್ತು ಆದೇಶದ ಕ್ರಮದಿಂದ ವಿಮುಕ್ತಿಗೊಳಿಸಿ ಆದೇಶಿಸಿದೆ.

ಮೇಲೆ ವಿವರಿಸಿದ ಕಾರಣಗಳಿಂದಾಗಿ, ಅರ್ಜಿದಾರರ ಕೋರಿಕೆ ಮೇರೆಗೆ ಈ ದಾವಾ ಅರ್ಜಿಯನ್ನು ವಜಾಗೊಳಿಸಿ ಆದೇಶಿಸಿದೆ.

-: ಅನುಸೂಚಿ :-

ಷರತ್ತು ಪೂರ್ವಕ ಜಪ್ತು ಆದೇಶದಿಂದ ವಿಮುಕ್ತಿಗೊಳಿಸಿದ ಸ್ವತ್ತುಗಳ ವಿವರಗಳು

ಕ್ರ. ಸಂ.	ಖಾತೆದಾರರ ಹೆಸರು	ಸ್ಥಿರಾಸ್ತಿ ಇರುವ ಸ್ಥಳ	ಅಸೆಸ್‌ಮೆಂಟ್ ನಂ.	ವಿಸ್ತೀರ್ಣ	ತರಹೆ
1	ಶ್ರೀ ಕೆ.ಗಣೇಶನಾಯ್ಕ್ ಬಿನ್ ಕಾಳ್ಯಾನಾಯ್ಕ್	ಎಲ್.ಬಿ.ಎಸ್.ನಗರ, ಶಿವಮೊಗ್ಗ ವಾರ್ಡ್ ಸಂ.1	1278/1278/ 1822/392	30' ಅಡಿ 40' ಅಡಿ ನಿವೇಶನದಲ್ಲಿ ಇರುವ ಆರ್‌ಸಿಸಿ, ಆಂಧ್ರಟೈಲ್ಸ್ ಮನೆ.850 ಚದರಅಡಿ.	ಆರ್‌ಸಿಸಿ, ಆಂಧ್ರ ಟೈಲ್ಸ್ ಮನೆ. 850 ಚದರಅಡಿ

ಸ್ವತ್ತಿನ ಚಕ್ಕುಬಂದಿ:

ಪೂರ್ವ : ಶ್ರೀ ಎಸ್.ಸಿ.ಚೀಲೂರುಮನೆ ನಂ.393

ಪಶ್ಚಿಮ : ಶ್ರೀ ಗಂಗಪ್ಪ, ಇವರ ಮನೆ ನಂ.391

ಉತ್ತರ : ಮುಚ್ಚಿಗರ ಸಮುದಾಯ ಭವನ

ದಕ್ಷಿಣ : 30 ಅಡಿ ರಸ್ತೆ.

ಈ ಆದೇಶವನ್ನು ನ್ಯಾಯಾಲಯದ ಮೊಹರು ಮತ್ತು ಸ್ವಸಹಿಯೊಂದಿಗೆ ದಿನಾಂಕ:22-03-2013ರಂದು ತೆರೆದ ನ್ಯಾಯಾಲಯದಲ್ಲಿ ಹೊರಡಿಸಿದೆ.

ಅಶೋಕ.ವೆಂ.ಮೊರಬ
ಸಹಕಾರ ಸಂಘಗಳ ಉಪನಿಬಂಧಕರು,
ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.

PR.2123

ಸಹಕಾರ ಸಂಘಗಳ ಉಪನಿಬಂಧಕರು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಇವರ ನ್ಯಾಯಾಲಯದಲ್ಲಿ
ದಾವಾ ಸಂಖ್ಯೆ:ಡಿಆರ್‌ಎಸ್/ಎ.ಬಿ.ಜೆ/01/2013-14

ಅರ್ಜಿದಾರರು:	ವಿರುದ್ಧ	ಎದುರು ಅರ್ಜಿದಾರರು:
ಸಾಗರ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ, ಎ.ಪಿ.ಎಂ.ಸಿ ಯಾರ್ಡ್, ಸಾಗರ ಇದನ್ನು ಪ್ರತಿನಿಧಿಸುವವರುಇದರ ಪ್ರಭಾರ ವ್ಯವಸ್ಥಾಪಕರು.		1.ಚಂದ್ರಪ್ರಸಾದಎಸ್, ಬಿನ್ ಲೇಟ್ ಶಾಂತಪ್ಪ, ವ್ಯವಸ್ಥಾಪಕರು,(ಅಮಾನತ್ತಿನಲ್ಲಿರುವ) ಟಿ.ಎ.ಪಿ.ಸಿ.ಎಂ.ಎಸ್ ಲಿ, ಸಾಗರ 2. ಶ್ರೀಮತಿ ವಿಜಯ ಕೋಂ.ಚಂದ್ರಪ್ರಸಾದ ಎಸ್., ಇಬ್ಬರ ವಾಸ: ಮಾರಿಕಾಂಬ ರಸ್ತೆ, ಸಾಗರ

ನೋಟೀಸ್

(ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 103ರ ಮೇರೆಗೆ ತೀರ್ಪು ಪೂರ್ವ ಜಪ್ತು ಆದೇಶ)

ಪ್ರಸ್ತಾವನೆ

ಅರ್ಜಿದಾರ ಸಂಘವು ಈ ನ್ಯಾಯಾಲಯದಲ್ಲಿ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 103 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯಲ್ಲಿ 1ನೇ ಎದುರು ಅರ್ಜಿದಾರರು, ಅರ್ಜಿದಾರ ಸಂಘದಲ್ಲಿ ದಾಸ್ತಾನು ಮತ್ತು ಹಣದುರುಪಯೋಗಪಡಿಸಿಕೊಂಡಿರುವ ಬಾಬ್ತು 2010-11ನೇ ಸಾಲಿನಲ್ಲಿ ರೂ.1132487-00 ಗಳು ಹಾಗೂ 2011-12 ಮತ್ತು 2012-13ನೇ ಸಾಲಿನ ಬಾಬ್ತಿನ ಮೊಬಲಗು ಸೇರಿಸಿ ರೂ.20 ಲಕ್ಷಗಳು ಮೀರಿ 1ನೇ ಎದುರು ಅರ್ಜಿದಾರರಿಂದ ಅರ್ಜಿದಾರ ಸಂಘಕ್ಕೆ ವಸೂಲಿಯಾಗಬೇಕಾಗಿರುತ್ತದೆ. 1ನೇ ಎದುರು ಅರ್ಜಿದಾರರು ಅರ್ಜಿದಾರ ಸಂಘದ ದಾಸ್ತಾನು ಮತ್ತು ಹಣದುರುಪಯೋಗಪಡಿಸಿಕೊಂಡಿರುವುದರಿಂದ ಮೇಲ್ಕಂಡ ಅರ್ಜಿಯಲ್ಲಿ ವಿವರಿಸಿರುವ ಶೆಡ್ಯೂಲ್ ಸ್ವತ್ತಿನ ಮಾಲೀಕರಾದ 1ನೇ ಎದುರು ಅರ್ಜಿದಾರರ ಪತ್ನಿಯಾದ 2ನೇ ಎದುರು ಅರ್ಜಿದಾರರು ದಿನಾಂಕ:17-09-2012ರಂದು ಅರ್ಜಿದಾರ ಸಂಘಕ್ಕೆ ಶೂರಿಟಿ ಬಾಂಡ್ ಬರೆದುಕೊಟ್ಟಿರುತ್ತಾರೆ. 1ನೇ ಎದುರು ಅರ್ಜಿದಾರರು ಅರ್ಜಿದಾರ ಸಂಘದಲ್ಲಿ ದಾಸ್ತಾನು ಮತ್ತು ಹಣದುರುಪಯೋಗಪಡಿಸಿಕೊಂಡಿರುವ ಬಾಬ್ತಿನ ಮೊಬಲಗನ್ನು ವಸೂಲಾತಿಗೆ ನೋಟೀಸ್ ನೀಡಿದರು ಸಹ ಸದರಿಯವರಿಂದ ಯಾವುದೇ ಉತ್ತರ ಬಾರದೆ ಇರುವುದರಿಂದ ಅರ್ಜಿದಾರ ಸಂಘವು ಕಾನೂನಿನ ಪ್ರಕಾರ ವಸೂಲಿ ಮಾಡಿಕೊಳ್ಳಬೇಕಾಗಿರುತ್ತದೆ. ಈ ಮಧ್ಯೆ 1ನೇ ಮತ್ತು 2ನೇ ಎದುರು ಅರ್ಜಿದಾರರು ವಿದೇಶ(ಅಬುದಾಬಿ)ದಲ್ಲಿರುವ ತಮ್ಮ ಮಗಳ ಮನೆಗೆ ಹೋಗುವ ತಯಾರಿಯಲ್ಲಿತ್ತಾರೆ. ಎದುರು ಅರ್ಜಿದಾರರು ವಿದೇಶಕ್ಕೆ ತೆರಳಿದರೆ ಅರ್ಜಿದಾರ ಸಂಘವು ತನಗೆ ಬರಬೇಕಾದ ಹಣದ ವಸೂಲಾತಿ ಕ್ರಮಕ್ಕೆ ತಡೆಯುಂಟಾಗುತ್ತದೆ ಎಂದು ತಿಳಿಸಿ, ಎದುರು ಅರ್ಜಿದಾರರು ಈ ರೀತಿ ವಸೂಲಾತಿ ಕ್ರಮಕ್ಕೆ ತಡೆಯುಂಟು ಮಾಡುವುದನ್ನು ತಪ್ಪಿಸಲು ಸಹಕಾರ ಸಂಘಗಳ ಕಾಯ್ದೆ ಕಲಂ 103 ರಡಿಯಲ್ಲಿ ತೀರ್ಪು ಪೂರ್ವ ಜಪ್ತಿ ಕ್ರಮವನ್ನು ಕೋರಿದ್ದಾರೆ, ಈ ಕೋರಿಕೆಯುಕ್ತವಾಗಿದೆಯೆಂದು ಸ್ವತಃ ಈ ನ್ಯಾಯಾಲಯಕ್ಕೆ ಮನವರಿಕೆಯಾಗಿದ್ದು, ಈ ಕೆಳಕಂಡ ತೀರ್ಪು ಪೂರ್ವ ಷರತ್ತುಬದ್ಧ ಜಪ್ತು ಆದೇಶದ ನೋಟೀಸನ್ನು ಹೊರಡಿಸಲಾಗಿದೆ.

ಸಂ:ಡಿಆರ್‌ಎಸ್/ಎ.ಬಿ.ಜೆ/ಕಲಂ-103/2013-14. ದಿನಾಂಕ:31-07-2013

: ಆ ದೇ ಶ :

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಗಾಗಿ ಎಸ್.ಹೆಚ್.ಸಂತೋಷ್‌ಕುಮಾರ್, ಸಹಕಾರ ಸಂಘಗಳ ಉಪನಿಬಂಧಕರು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಆದ ನಾನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 103 ರನ್ವಯ ಮತ್ತು ಕರ್ನಾಟಕ ಸರ್ಕಾರದ ಅಧಿಸೂಚನೆ ಸಂ.ಸಿಓ /139 /ಸಿಎಲ್‌ಎಂ/2010, ಬೆಂಗಳೂರು, ದಿನಾಂಕ:17-02-2011ರನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಈ ಆದೇಶದೊಂದಿಗೆ ಇರುವ ಅನುಸೂಚಿಯಲ್ಲಿ ಕಾಣಿಸಿರುವ ಸ್ಥಿರಾಸ್ತಿಗಳನ್ನು ಷರತ್ತು ಪೂರ್ವಕ ಜಪ್ತುಗೊಳಿಸಲಾಗಿದೆಯೆಂದು ಆದೇಶಿಸಿದೆ.

ಅಲ್ಲದೇ, ಎದುರು ಅರ್ಜಿದಾರರುತಮ್ಮ ಸ್ಥಿರಾಸ್ತಿಯನ್ನು ಷರತ್ತು ಪೂರ್ವ ಜಪ್ತು ಆಜ್ಞೆಯ ವ್ಯಾಪ್ತಿಯಿಂದ ಹೊರತರಲು ಇಚ್ಛಿಸಿದಲ್ಲಿ ಜಪ್ತುಗೊಳಿಸಲ್ಪಟ್ಟ ಆಸ್ತಿಯ ಮೌಲ್ಯಕ್ಕೆ ಮತ್ತು ನ್ಯಾಯಾಲಯ ಸರಿಯೆಂದು ಭಾವಿಸುವ ನಗದು ಭದ್ರತೆಯನ್ನು ಸಾಗರ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ, ಸಾಗರ ಇಲ್ಲಿ ಅಮಾನತ್‌ಖಾತೆಯಲ್ಲಿ ತೊಡಗಿಸಿ, ಈ ಬಗ್ಗೆ ರಶೀದಿಯ ಪ್ರತಿಯನ್ನು ದಿನಾಂಕ:27-08-2013ರ ಒಳಗೆ ಈ ಕೆಳಸಹಿದಾರರಿಗೆ ಹಾಜರುಪಡಿಸುವ ಮೂಲಕ ಜಪ್ತು ಆಜ್ಞೆಯಿಂದ ಹೊರಗುಳಿಯಬಹುದೆಂದು ಸಹ ಸಂಬಂಧಿಸಿದವರಿಗೆ ಈ ನೋಟೀಸ್ ನೀಡಲಾಗಿದೆ. ಭದ್ರತೆಯನ್ನು ಒದಗಿಸುವ ಮತ್ತು ಷರತ್ತು ಪೂರೈಸುವುದಕ್ಕೆ ವಿಫಲರಾದಲ್ಲಿ ಈ ಷರತ್ತು ಪೂರ್ವಕ ಜಪ್ತು ಆಜ್ಞೆಯನ್ನು ಸ್ಥಿರೀಕರಿಸಲಾಗುವುದೆಂದು ತಿಳಿಯತಕ್ಕದ್ದು.

ಈ ಆದೇಶದ ಅನುಸೂಚಿಯಲ್ಲಿರುವ ಸ್ವತ್ತುಗಳನ್ನು ಪಡೆಯುವ ಅಥವಾ ಖರೀದಿಸುವ ವ್ಯಕ್ತಿ ಅಥವಾ ಸಂಸ್ಥೆಗಳು ಸಹ ಷರತ್ತು ಪೂರ್ವಕ ಜಪ್ತು ಆಜ್ಞೆಗೆ ಒಳಪಡುವರು ಎಂದು ಸಹ ಆದೇಶಿಸಿದೆ.

ಈ ಪ್ರಕರಣದ ವಿಚಾರಣೆಯನ್ನು ದಿನಾಂಕ:27-08-2013ರ ಅಪರಾಹ್ನ 3-30ಕ್ಕೆ ನಿಗದಿಪಡಿಸಿದೆ. ಉಭಯತ್ರರು ಪ್ರಕರಣದ ವಿಚಾರಣೆಗೆ ಲಭ್ಯವಿರಬಹುದಾದ ದಾಖಲೆಗಳೊಂದಿಗೆ ಹಾಜರಾಗಲು ತಿಳಿಸಿದೆ.

ಷರತ್ತು ಪೂರ್ವಕ ಜಪ್ತು ಆದೇಶಕ್ಕೆ ಒಳಗಾದ ಸ್ವತ್ತುಗಳ ಅನುಸೂಚಿ

ಕ್ರ.ಸಂ.	ಖಾತೆದಾರರ ಹೆಸರು	ಸ್ಥಿರಾಸ್ತಿ ಇರುವ ಸ್ಥಳ	ಅಸೆಸ್ ಮೆಂಟ್‌ನಂ.	ವಿಸ್ತೀರ್ಣ	ತರಹೆ
1	ಶ್ರೀಮತಿ ವಿಜಯ ಕೋಂ.ಚಂದ್ರಪ್ರಸಾದ, ಮಾರಿಕಾಂಬ ರಸ್ತೆ,ಸಾಗರ	ಮಾರಿಕಾಂಬ ರಸ್ತೆ, ಸಾಗರ	289/289/ 356/01	22' ಅಡಿ 50' ಅಡಿ ನಿವೇಶನದಲ್ಲಿ ಇರುವ ಆರ್.ಸಿ.ಸಿ. ಮನೆ	ಆರ್.ಸಿ.ಸಿ. ಮನೆ

ಈ ಆದೇಶವನ್ನು ನ್ಯಾಯಾಲಯದ ಮೊಹರು ಮತ್ತು ಸ್ವಸಹಿಯೊಂದಿಗೆ ದಿನಾಂಕ:31-07-2013ರಂದು ತೆರೆದ ನ್ಯಾಯಾಲಯದಲ್ಲಿ ನೀಡಿದೆ.

ಎಸ್. ಹೆಚ್. ಸಂತೋಷ್ ಕುಮಾರ್
ಸಹಕಾರ ಸಂಘಗಳ ಉಪನಿಬಂಧಕರು,
ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.

PR.2103

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ.

ಕ್ರಮ ಸಂಖ್ಯೆ/ಡಿಆರ್‌ಕೆ/ಎಲ್‌ಕ್ಯೂಡಿ/ಸಿಆರ್ 56/2013-14 ದಿನಾಂಕ: 28-5-2013

ವಿಷಯ: ಕಾರ್ಯವನ್ನು ನಿರ್ವಹಿಸದೇ ಸ್ಥಗಿತಗೊಂಡಿರುವ ಕಪ್ಪಲಮಡಗು ಹಾಲು ಉತ್ಪಾದಕರ ಸಹಕಾರ ಸಂಘ (ನಿ), ಮುಳಬಾಗಿಲು ತಾಲ್ಲೂಕು ಈ ಸಂಘವನ್ನು ಸಮಾಪನೆಗೆ ಒಳಪಡಿಸಿ ಸಂಘಕ್ಕೆ ಸಮಾಪನಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ.

ಉಲ್ಲೇಖ: 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕೋಲಾರ ಉಪವಿಭಾಗ, ಕೋಲಾರ ರವರ ಪತ್ರ ಸಂಖ್ಯೆ:ಎಆರ್49/ಸಮಾಪನೆ/ಸಿಆರ್ 162/2013-14 ದಿನಾಂಕ: 25-2-2013.

2) ಈ ಕಛೇರಿಯ ನೋಟೀಸ್ ದಿನಾಂಕ: 5-3-2013.

ಪ್ರಸ್ತಾವನೆ:-

ಕಪ್ಪಲಮಡಗು ಹಾಲು ಉತ್ಪಾದಕರ ಸಹಕಾರ ಸಂಘ (ನಿ), ಮುಳಬಾಗಿಲು ತಾಲ್ಲೂಕು ಇದು ತನ್ನ ಕಾರ್ಯವನ್ನು ನಿರ್ವಹಿಸದೇ ಸ್ಥಗಿತಗೊಂಡಿರುವುದಾಗಿ ಸಂಘವನ್ನು ಪುನಃಶ್ಚೇತನಗೊಳಿಸಲು ಸಾಧ್ಯವಿಲ್ಲದಿರುವುದರಿಂದ ಸಮಾಪನೆಗೊಳಿಸಬೇಕೆಂದು ಉಲ್ಲೇಖದ ಪತ್ರದಲ್ಲಿ ಕೋಲಾರ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಶಿಫಾರಸ್ಸು ಮಾಡಿರುತ್ತಾರೆ. ಈ ಕಛೇರಿಯಿಂದ ಉಲ್ಲೇಖ (2) ರಂತೆ ಸಂಘದ ಆಡಳಿತ ಮಂಡಳಿ ಸದಸ್ಯರಿಗೆ ನೋಟೀಸ್ ನೀಡಿ ಸಂಘವನ್ನು ಸಮಾಪನೆಗೊಳಿಸುವ ಬಗ್ಗೆ ಒಂದು ವಾರದೊಳಗಾಗಿ ವಿವರಣೆ/ಹೇಳಿಕೆಯನ್ನು ನೀಡುವಂತೆ ತಿಳಿಸಲಾಗಿತ್ತು. ಅದರಂತೆ ಸಂಘದ ಆಡಳಿತ ಮಂಡಳಿ ಸದಸ್ಯರು ನೋಟೀಸನ್ನು ಪಡೆದಿದ್ದರೂ ಸಹ ನಿಗಧಿತ ಗಡವು ಮುಗಿದರೂ ಸಹ ಯಾವುದೇ ವಿವರಣೆ/ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ.

ಅಲ್ಲದೇ ಕೋಲಾರ ಹಾಲು ಒಕ್ಕೂಟದ ಅಧಿಕಾರಿಗಳು ಸಹ ಪ್ರಸ್ತಾವನೆಯನ್ನು ಪರಿಶೀಲಿಸಿ ಸಂಘವು ತನ್ನ ಬೈಲಾ ರೀತ್ಯಾ ಕಾರ್ಯ ನಿರ್ವಹಿಸದಂತೆ ಸ್ಥಗಿತಗೊಂಡಿದ್ದು, ಈ ಸಂಘವನ್ನು ಮುಂದುವರೆಸುವುದರಿಂದ ಸದಸ್ಯರಿಗೆ ಯಾವುದೇ ಪ್ರಯೋಜನ ಇಲ್ಲದಿರುವುದರಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 72 ರನ್ವಯ ಸಮಾಪನೆಗೊಳಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟಿರುವುದಾಗಿ ತಿಳಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಹಾಗೂ ಕೋಲಾರ ಹಾಲು ಒಕ್ಕೂಟದ ಅಧಿಕಾರಿಗಳ ಮತ್ತು ಕೋಲಾರ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಅಭಿಪ್ರಾಯದಂತೆ ಹಾಗೂ ಶಿಫಾರಸ್ಸು ಮೇರೆಗೆ ಸಂಘವನ್ನು ಸಮಾಪನೆಗೊಳಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಸಂಘಕ್ಕೆ ಸಮಾಪನಾಧಿಕಾರಿಯನ್ನು ನೇಮಕ ಮಾಡಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಆದೇಶ

ಈ ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2)(ಇ) ಅನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಎಂಡಬ್ಲ್ಯೂ/69/ಸಿಎಲ್‌ಎಂ/2001 ದಿನಾಂಕ: 21-11-2001 ರಂತೆ ದತ್ತವಾದ ಅಧಿಕಾರವನ್ನು ಪ್ರಯೋಗಿಸಿ ಡಿ.ಬಿ.ಲಿಂಗಣ್ಣಯ್ಯ, ಸಹಕಾರ ಸಂಘಗಳ ಉಪನಿಬಂಧಕರು, ಕೋಲಾರ ಜಿಲ್ಲೆ, ಕೋಲಾರ ಆದ ನಾನು ಕಪ್ಪಲಮಡಗು ಹಾಲು ಉತ್ಪಾದಕರ ಸಂಘ (ನಿ), ಕಪ್ಪಲಮಡಗು, ಮುಳಬಾಗಿಲು ತಾಲ್ಲೂಕು ಈ ಸಂಘವನ್ನು ಸಮಾಪನೆಗೊಳಿಸಿ ಸಂಘಕ್ಕೆ ವಿಸ್ತೀರ್ಣಾಧಿಕಾರಿ, ಕೋಲಾರ-ಚಿಕ್ಕಬಳ್ಳಾಪುರ ಹಾಲು ಒಕ್ಕೂಟ ನಿ., ಮುಳಬಾಗಿಲು ಶಿಬಿರ ಕಛೇರಿ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿ ಆದೇಶವನ್ನು ಹೊರಡಿಸಿರುತ್ತೇನೆ.

ಸಂಘದ ಸಮಾಪನಾಧಿಕಾರಿಗಳು ಸಂಘದ ಸಂಪೂರ್ಣ ಪ್ರಭಾರವನ್ನು ಪಡೆದು ಸಂಘದ ಆಸ್ತಿ-ಜವಾಬ್ದಾರಿಗಳನ್ನು 3 ತಿಂಗಳ ಒಳಗಾಗಿ ವಿಲೇವಾರಿ ಮಾಡಿ ಸಂಘದ ನೋಂದಣಿಯನ್ನು ರದ್ದುಪಡಿಸಲು ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿದೆ.

ಈ ಆದೇಶವನ್ನು ನನ್ನ ಸಹಿ ಮತ್ತು ಕಛೇರಿ ಮೊಹರಿನೊಂದಿಗೆ ದಿನಾಂಕ: 28-5-2013 ರಂದು ಹೊರಡಿಸಿದೆ.

PR.2116 ಸಹಕಾರ ಸಂಘಗಳ ಉಪನಿಬಂಧಕರು, ಕೋಲಾರ ಜಿಲ್ಲೆ, ಕೋಲಾರ.

SC.10

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ.

ಕ್ರಮ ಸಂಖ್ಯೆ/ಡಿಆರ್‌ಕೆ/ಎಲ್‌ಕ್ಯೂಡಿ/ಸಿಆರ್.122/2013-14 ದಿನಾಂಕ: 28-5-2013

ವಿಷಯ: ಕಾರ್ಯವನ್ನು ನಿರ್ವಹಿಸದೇ ಸ್ಥಗಿತಗೊಂಡಿರುವ ಸೀತಂಪಲ್ಲಿ ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘ (ನಿ), ಬಂಗಾರಪೇಟೆ ತಾಲ್ಲೂಕು ಈ ಸಂಘವನ್ನು ಸಮಾಪನೆಗೆ ಒಳಪಡಿಸಿ ಸಂಘಕ್ಕೆ ಸಮಾಪನಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ.

ಉಲ್ಲೇಖ: 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕೋಲಾರ ಉಪವಿಭಾಗ, ಕೋಲಾರ ರವರ ಪತ್ರ ಸಂಖ್ಯೆ:ಎಆರ್49/ಸಮಾಪನೆ/ಸಿಆರ್ 146/2013-14 ದಿನಾಂಕ: 14-2-2013.

2) ಈ ಕಛೇರಿಯ ನೋಟೀಸ್ ದಿನಾಂಕ: 5-3-2013.

ಪ್ರಸ್ತಾವನೆ:-

ಸೀತಂಪಲ್ಲಿ ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘ (ನಿ), ಬಂಗಾರಪೇಟೆ ತಾಲ್ಲೂಕು ಇದು ತನ್ನ ಕಾರ್ಯವನ್ನು ನಿರ್ವಹಿಸದೇ ಸ್ಥಗಿತಗೊಂಡಿರುವುದಾಗಿ ಸಂಘವನ್ನು ಪುನಃಶ್ಚೇತನಗೊಳಿಸಲು ಸಾಧ್ಯವಿಲ್ಲದಿರುವುದರಿಂದ ಸಮಾಪನೆಗೊಳಿಸಬೇಕೆಂದು ಉಲ್ಲೇಖದ ಪತ್ರದಲ್ಲಿ ಕೋಲಾರ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಶಿಫಾರಸ್ಸು ಮಾಡಿರುತ್ತಾರೆ. ಈ ಕಛೇರಿಯಿಂದ ಉಲ್ಲೇಖ (2) ರಂತೆ ಸಂಘದ ಆಡಳಿತ ಮಂಡಳಿ ಸದಸ್ಯರಿಗೆ ನೋಟೀಸ್ ನೀಡಿ ಸಂಘವನ್ನು ಸಮಾಪನೆಗೊಳಿಸುವ ಬಗ್ಗೆ ಒಂದು ವಾರದೊಳಗಾಗಿ ವಿವರಣೆ/ಹೇಳಿಕೆಯನ್ನು ನೀಡುವಂತೆ

ತಿಳಿಸಲಾಗಿತ್ತು. ಅದರಂತೆ ನೋಟೀಸ್ ಜಾರಿ ಮಾಡಲು ಜಾರಿಗಾರರು ಹೋದಾಗ ನೋಟೀಸ್ ಪಡೆಯಲು ತಿರಸ್ಕರಿಸಿರುತ್ತಾರೆಂದು ಜಾರಿಗಾರರು ವರದಿ ಮಾಡಿರುತ್ತಾರೆ.

ಅಲ್ಲದೇ ಕೋಲಾರ ಹಾಲು ಒಕ್ಕೂಟದ ಅಧಿಕಾರಿಗಳು ಸಹ ಪ್ರಸ್ತಾವನೆಯನ್ನು ಪರಿಶೀಲಿಸಿ ಸಂಘವು ತನ್ನ ಬೈಲಾ ರೀತ್ಯಾ ಕಾರ್ಯ ನಿರ್ವಹಿಸದಂತೆ ಸ್ಥಗಿತಗೊಂಡಿದ್ದು, ಈ ಸಂಘವನ್ನು ಮುಂದುವರೆಸುವುದರಿಂದ ಸದಸ್ಯರಿಗೆ ಯಾವುದೇ ಪ್ರಯೋಜನ ಇಲ್ಲದಿರುವುದರಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 72 ರನ್ವಯ ಸಮಾಪನೆಗೊಳಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟಿರುವುದಾಗಿ ತಿಳಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಹಾಗೂ ಕೋಲಾರ ಹಾಲು ಒಕ್ಕೂಟದ ಅಧಿಕಾರಿಗಳ ಮತ್ತು ಕೋಲಾರ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಅಭಿಪ್ರಾಯದಂತೆ ಹಾಗೂ ಶಿಫಾರಸ್ಸು ಮೇರೆಗೆ ಸಂಘವನ್ನು ಸಮಾಪನೆಗೊಳಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಸಂಘಕ್ಕೆ ಸಮಾಪನಾಧಿಕಾರಿಯನ್ನು ನೇಮಕ ಮಾಡಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

:-ಆದೇಶ:-

ಈ ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2)(ಇ) ಅನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಎಂಡಬ್ಲ್ಯೂ/69/ಸಿಎಲ್ಎಂ/2001 ದಿನಾಂಕ: 21-11-2001 ರಂತೆ ದತ್ತವಾದ ಅಧಿಕಾರವನ್ನು ಪ್ರಯೋಗಿಸಿ ಡಿ.ಬಿ.ಲಿಂಗಣ್ಣಯ್ಯ, ಸಹಕಾರ ಸಂಘಗಳ ಉಪನಿಬಂಧಕರು, ಕೋಲಾರ ಜಿಲ್ಲೆ, ಕೋಲಾರ ಆದ ನಾನು ಸೀತಂಪಲ್ಲಿ ಮಹಿಳಾ ಹಾಲು ಉತ್ಪಾದಕರ ಸಂಘ (ನಿ), ಸೀತಂಪಲ್ಲಿ, ಬಂಗಾರಪೇಟೆ ತಾಲ್ಲೂಕು ಈ ಸಂಘವನ್ನು ಸಮಾಪನೆಗೊಳಿಸಿ ಸಂಘಕ್ಕೆ ವಿಸ್ತೀರ್ಣಾಧಿಕಾರಿ, ಕೋಲಾರ-ಚಿಕ್ಕಬಳ್ಳಾಪುರ ಹಾಲು ಒಕ್ಕೂಟ ನಿ., ಬಂಗಾರಪೇಟೆ ಶಿಬಿರ ಕಛೇರಿ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿ ಆದೇಶವನ್ನು ಹೊರಡಿಸಿರುತ್ತೇನೆ.

ಸಂಘದ ಸಮಾಪನಾಧಿಕಾರಿಗಳು ಸಂಘದ ಸಂಪೂರ್ಣ ಪ್ರಭಾರವನ್ನು ಪಡೆದು ಸಂಘದ ಆಸ್ತಿ-ಜವಾಬ್ದಾರಿಗಳನ್ನು 3 ತಿಂಗಳ ಒಳಗಾಗಿ ವಿಲೇವಾರಿ ಮಾಡಿ ಸಂಘದ ನೋಂದಣಿಯನ್ನು ರದ್ದುಪಡಿಸಲು ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿದೆ.

ಈ ಆದೇಶವನ್ನು ನನ್ನ ಸಹಿ ಮತ್ತು ಕಛೇರಿ ಮೊಹರಿನೊಂದಿಗೆ ದಿನಾಂಕ: 28-5-2013 ರಂದು ಹೊರಡಿಸಿದೆ.

ಸಹಕಾರ ಸಂಘಗಳ ಉಪನಿಬಂಧಕರು, ಕೋಲಾರ ಜಿಲ್ಲೆ, ಕೋಲಾರ.

PR.2118
SC.10

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ.

ಕ್ರಮ ಸಂಖ್ಯೆ/ಡಿಆರ್‌ಕೆ/ಎಲ್‌ಕ್ಯೂಡಿ/ಸಿಆರ್ 124 /2013-14 ದಿನಾಂಕ: 28-5-2013

ವಿಷಯ: ಕಾರ್ಯವನ್ನು ನಿರ್ವಹಿಸದೇ ಸ್ಥಗಿತಗೊಂಡಿರುವ ನಲ್ಲೂರು ಹಾಲು ಉತ್ಪಾದಕರ ಸಹಕಾರ ಸಂಘ (ನಿ), ಬಂಗಾರಪೇಟೆ ತಾಲ್ಲೂಕು ಈ ಸಂಘವನ್ನು ಸಮಾಪನೆಗೆ ಒಳಪಡಿಸಿ ಸಂಘಕ್ಕೆ ಸಮಾಪನಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ.

ಉಲ್ಲೇಖ: 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕೋಲಾರ ಉಪವಿಭಾಗ, ಕೋಲಾರ ರವರ ಪತ್ರ ಸಂಖ್ಯೆ:ಎಆರ್49/ಸಮಾಪನೆ/ಸಿಆರ್ 142/2013-14 ದಿನಾಂಕ: 5-3-2013.

2) ಈ ಕಛೇರಿಯ ನೋಟೀಸ್ ದಿನಾಂಕ: 5-3-2013.

ಪ್ರಸ್ತಾವನೆ:-

ನಲ್ಲೂರು ಹಾಲು ಉತ್ಪಾದಕರ ಸಹಕಾರ ಸಂಘ (ನಿ), ಬಂಗಾರಪೇಟೆ ತಾಲ್ಲೂಕು ಇದು ತನ್ನ ಕಾರ್ಯವನ್ನು ನಿರ್ವಹಿಸದೇ ಸ್ಥಗಿತಗೊಂಡಿರುವುದಾಗಿ ಸಂಘವನ್ನು ಪುನ:ಶ್ಚೇತನಗೊಳಿಸಲು ಸಾಧ್ಯವಿಲ್ಲದಿರುವುದರಿಂದ ಸಮಾಪನೆಗೊಳಿಸಬೇಕೆಂದು ಉಲ್ಲೇಖದ ಪತ್ರದಲ್ಲಿ ಕೋಲಾರ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಶಿಫಾರಸ್ಸು ಮಾಡಿರುತ್ತಾರೆ. ಈ ಕಛೇರಿಯಿಂದ ಉಲ್ಲೇಖ (2) ರಂತೆ ಸಂಘದ ಆಡಳಿತ ಮಂಡಳಿ ಸದಸ್ಯರಿಗೆ ನೋಟೀಸ್ ನೀಡಿ ಸಂಘವನ್ನು ಸಮಾಪನೆಗೊಳಿಸುವ ಬಗ್ಗೆ ಒಂದು ವಾರದೊಳಗಾಗಿ ವಿವರಣೆ/ಹೇಳಿಕೆಯನ್ನು ನೀಡುವಂತೆ ತಿಳಿಸಲಾಗಿತ್ತು. ಅದರಂತೆ ನೋಟೀಸ್ ಜಾರಿ ಮಾಡಲು ಸದರಿ ಗ್ರಾಮಕ್ಕೆ ಜಾರಿಗಾರರು ಹೋದಾಗ ನೋಟೀಸ್ ಪಡೆಯಲು ತಿರಸ್ಕರಿಸಿರುತ್ತಾರೆಂದು ಜಾರಿಗಾರರು ವರದಿ ಮಾಡಿರುತ್ತಾರೆ.

ಅಲ್ಲದೇ ಕೋಲಾರ ಹಾಲು ಒಕ್ಕೂಟದ ಅಧಿಕಾರಿಗಳು ಸಹ ಪ್ರಸ್ತಾವನೆಯನ್ನು ಪರಿಶೀಲಿಸಿ ಸಂಘವು ತನ್ನ ಬೈಲಾ ರೀತ್ಯಾ ಕಾರ್ಯ ನಿರ್ವಹಿಸದಂತೆ ಸ್ಥಗಿತಗೊಂಡಿದ್ದು, ಈ ಸಂಘವನ್ನು ಮುಂದುವರೆಸುವುದರಿಂದ ಸದಸ್ಯರಿಗೆ ಯಾವುದೇ ಪ್ರಯೋಜನ ಇಲ್ಲದಿರುವುದರಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 72 ರನ್ವಯ ಸಮಾಪನೆಗೊಳಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟಿರುವುದಾಗಿ ತಿಳಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಹಾಗೂ ಕೋಲಾರ ಹಾಲು ಒಕ್ಕೂಟದ ಅಧಿಕಾರಿಗಳ ಮತ್ತು ಕೋಲಾರ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಅಭಿಪ್ರಾಯದಂತೆ ಹಾಗೂ ಶಿಫಾರಸ್ಸು ಮೇರೆಗೆ ಸಂಘವನ್ನು ಸಮಾಪನೆಗೊಳಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಸಂಘಕ್ಕೆ ಸಮಾಪನಾಧಿಕಾರಿಯನ್ನು ನೇಮಕ ಮಾಡಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

:-ಆದೇಶ:-

ಈ ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2)(ಇ) ಅನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಎಂಡಬ್ಲ್ಯೂ/69/ಸಿಎಲ್ಎಂ/2001 ದಿನಾಂಕ: 21-11-2001 ರಂತೆ ದತ್ತವಾದ ಅಧಿಕಾರವನ್ನು ಪ್ರಯೋಗಿಸಿ ಡಿ.ಬಿ.ಲಿಂಗಣ್ಣಯ್ಯ, ಸಹಕಾರ ಸಂಘಗಳ ಉಪನಿಬಂಧಕರು, ಕೋಲಾರ ಜಿಲ್ಲೆ, ಕೋಲಾರ ಆದ ನಾನು ನಲ್ಲೂರು ಹಾಲು ಉತ್ಪಾದಕರ ಸಂಘ (ನಿ), ನಲ್ಲೂರು,

ಬಂಗಾರಪೇಟೆ ತಾಲ್ಲೂಕು ಈ ಸಂಘವನ್ನು ಸಮಾಪನೆಗೊಳಿಸಿ ಸಂಘಕ್ಕೆ ವಿಸ್ತೀರ್ಣಾಧಿಕಾರಿ, ಕೋಲಾರ-ಚಿಕ್ಕಬಳ್ಳಾಪುರ ಹಾಲು ಒಕ್ಕೂಟ ನಿ., ಬಂಗಾರಪೇಟೆ ಶಿಬಿರ ಕಛೇರಿ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿ ಆದೇಶವನ್ನು ಹೊರಡಿಸಿರುತ್ತೇನೆ.

ಸಂಘದ ಸಮಾಪನಾಧಿಕಾರಿಗಳು ಸಂಘದ ಸಂಪೂರ್ಣ ಪ್ರಭಾರವನ್ನು ಪಡೆದು ಸಂಘದ ಆಸ್ತಿ-ಜವಾಬ್ದಾರಿಗಳನ್ನು 3 ತಿಂಗಳ ಒಳಗಾಗಿ ವಿಲೇವಾರಿ ಮಾಡಿ ಸಂಘದ ನೋಂದಣಿಯನ್ನು ರದ್ದುಪಡಿಸಲು ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿದೆ.

ಈ ಆದೇಶವನ್ನು ನನ್ನ ಸಹಿ ಮತ್ತು ಕಛೇರಿ ಮೊಹರಿನೊಂದಿಗೆ ದಿನಾಂಕ: 28-5-2013 ರಂದು ಹೊರಡಿಸಿದೆ.

PR.2114 ಸಹಕಾರ ಸಂಘಗಳ ಉಪನಿಬಂಧಕರು, ಕೋಲಾರ ಜಿಲ್ಲೆ, ಕೋಲಾರ.

SC.10

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ.

ಕ್ರಮ ಸಂಖ್ಯೆ/ಡಿಆರ್‌ಕೆ/ಎಲ್‌ಕ್ಯೂಡಿ/ಸಿಆರ್/119/2013-14 ದಿನಾಂಕ: 28-5-2013

ವಿಷಯ: ಕಾರ್ಯವನ್ನು ನಿರ್ವಹಿಸದೇ ಸ್ಥಗಿತಗೊಂಡಿರುವ ಮಾರಸಂದ್ರ ಹಾಲು ಉತ್ಪಾದಕರ ಸಹಕಾರ ಸಂಘ (ನಿ), ಬಂಗಾರಪೇಟೆ ತಾಲ್ಲೂಕು ಈ ಸಂಘವನ್ನು ಸಮಾಪನೆಗೆ ಒಳಪಡಿಸಿ ಸಂಘಕ್ಕೆ ಸಮಾಪನಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ.

ಉಲ್ಲೇಖ: 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕೋಲಾರ ಉಪವಿಭಾಗ, ಕೋಲಾರ ರವರ ಪತ್ರ ಸಂಖ್ಯೆ:ಎಆರ್49/ಸಮಾಪನೆ/ಸಿಆರ್ 145/2013-14 ದಿನಾಂಕ: 14-2-2013.

2) ಈ ಕಛೇರಿಯ ನೋಟೀಸ್ ದಿನಾಂಕ: 5-3-2013.

ಪ್ರಸ್ತಾವನೆ:-

ಮಾರಸಂದ್ರ ಹಾಲು ಉತ್ಪಾದಕರ ಸಹಕಾರ ಸಂಘ (ನಿ), ಬಂಗಾರಪೇಟೆ ತಾಲ್ಲೂಕು ಇದು ತನ್ನ ಕಾರ್ಯವನ್ನು ನಿರ್ವಹಿಸದೇ ಸ್ಥಗಿತಗೊಂಡಿರುವುದಾಗಿ ಸಂಘವನ್ನು ಪುನ:ಶ್ಚೇತನಗೊಳಿಸಲು ಸಾಧ್ಯವಿಲ್ಲದಿರುವುದರಿಂದ ಸಮಾಪನೆಗೊಳಿಸಬೇಕೆಂದು ಉಲ್ಲೇಖದ ಪತ್ರದಲ್ಲಿ ಕೋಲಾರ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಶಿಫಾರಸ್ಸು ಮಾಡಿರುತ್ತಾರೆ. ಈ ಕಛೇರಿಯಿಂದ ಉಲ್ಲೇಖ (2) ರಂತೆ ಸಂಘದ ಆಡಳಿತ ಮಂಡಳಿ ಸದಸ್ಯರಿಗೆ ನೋಟೀಸ್ ನೀಡಿ ಸಂಘವನ್ನು ಸಮಾಪನೆಗೊಳಿಸುವ ಬಗ್ಗೆ ಒಂದು ವಾರದೊಳಗಾಗಿ ವಿವರಣೆ/ಹೇಳಿಕೆಯನ್ನು ನೀಡುವಂತೆ ತಿಳಿಸಲಾಗಿತ್ತು. ಅದರಂತೆ ನೋಟೀಸ್ ಜಾರಿ ಮಾಡಲು ಜಾರಿಗಾರರು ಹೋದಾಗ ಊರಿನ ಗ್ರಾಮಸ್ಥರು ಈ ಊರಿನಲ್ಲಿ ಈ ಸಂಘವು ಅಸ್ತಿತ್ವದಲ್ಲಿ ಇರುವುದಿಲ್ಲವೆಂದು ತಿಳಿಸಿ ಮಹಜರ್ ಮಾಡಿದ್ದು, ಸಹಿ ಮಾಡಿರುತ್ತಾರೆ.

ಅಲ್ಲದೇ ಕೋಲಾರ ಹಾಲು ಒಕ್ಕೂಟದ ಅಧಿಕಾರಿಗಳು ಸಹ ಪ್ರಸ್ತಾವನೆಯನ್ನು ಪರಿಶೀಲಿಸಿ ಸಂಘವು ತನ್ನ ಬೈಲಾ ರೀತ್ಯಾ ಕಾರ್ಯ ನಿರ್ವಹಿಸದಂತೆ ಸ್ಥಗಿತಗೊಂಡಿದ್ದು, ಈ ಸಂಘವನ್ನು ಮುಂದುವರೆಸುವುದರಿಂದ ಸದಸ್ಯರಿಗೆ ಯಾವುದೇ ಪ್ರಯೋಜನ ಇಲ್ಲದಿರುವುದರಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 72 ರನ್ವಯ ಸಮಾಪನೆಗೊಳಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟಿರುವುದಾಗಿ ತಿಳಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಹಾಗೂ ಕೋಲಾರ ಹಾಲು ಒಕ್ಕೂಟದ ಅಧಿಕಾರಿಗಳ ಮತ್ತು ಕೋಲಾರ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಅಭಿಪ್ರಾಯದಂತೆ ಹಾಗೂ ಶಿಫಾರಸ್ಸು ಮೇರೆಗೆ ಸಂಘವನ್ನು ಸಮಾಪನೆಗೊಳಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಸಂಘಕ್ಕೆ ಸಮಾಪನಾಧಿಕಾರಿಯನ್ನು ನೇಮಕ ಮಾಡಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಆದೇಶ

ಈ ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2)(ಇ) ಅನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಎಂಡಬ್ಲ್ಯೂ/69/ಸಿಎಲ್‌ಎಂ/2001 ದಿನಾಂಕ: 21-11-2001 ರಂತೆ ದತ್ತವಾದ ಅಧಿಕಾರವನ್ನು ಪ್ರಯೋಗಿಸಿ ಡಿ.ಬಿ.ಲಿಂಗಣ್ಣಯ್ಯ, ಸಹಕಾರ ಸಂಘಗಳ ಉಪನಿಬಂಧಕರು, ಕೋಲಾರ ಜಿಲ್ಲೆ, ಕೋಲಾರ ಆದ ನಾನು ಮಾರಸಂದ್ರ ಹಾಲು ಉತ್ಪಾದಕರ ಸಂಘ (ನಿ), ಮಾರಸಂದ್ರ, ಬಂಗಾರಪೇಟೆ ತಾಲ್ಲೂಕು ಈ ಸಂಘವನ್ನು ಸಮಾಪನೆಗೊಳಿಸಿ ಸಂಘಕ್ಕೆ ವಿಸ್ತೀರ್ಣಾಧಿಕಾರಿ, ಕೋಲಾರ-ಚಿಕ್ಕಬಳ್ಳಾಪುರ ಹಾಲು ಒಕ್ಕೂಟ ನಿ., ಬಂಗಾರಪೇಟೆ ಶಿಬಿರ ಕಛೇರಿ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿ ಆದೇಶವನ್ನು ಹೊರಡಿಸಿರುತ್ತೇನೆ.

ಸಂಘದ ಸಮಾಪನಾಧಿಕಾರಿಗಳು ಸಂಘದ ಸಂಪೂರ್ಣ ಪ್ರಭಾರವನ್ನು ಪಡೆದು ಸಂಘದ ಆಸ್ತಿ-ಜವಾಬ್ದಾರಿಗಳನ್ನು 3 ತಿಂಗಳ ಒಳಗಾಗಿ ವಿಲೇವಾರಿ ಮಾಡಿ ಸಂಘದ ನೋಂದಣಿಯನ್ನು ರದ್ದುಪಡಿಸಲು ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿದೆ.

ಈ ಆದೇಶವನ್ನು ನನ್ನ ಸಹಿ ಮತ್ತು ಕಛೇರಿ ಮೊಹರಿನೊಂದಿಗೆ ದಿನಾಂಕ: 28-5-2013 ರಂದು ಹೊರಡಿಸಿದೆ.

PR.2115 ಸಹಕಾರ ಸಂಘಗಳ ಉಪನಿಬಂಧಕರು, ಕೋಲಾರ ಜಿಲ್ಲೆ, ಕೋಲಾರ.

SC.10

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ.

ಕ್ರಮ ಸಂಖ್ಯೆ/ಡಿಆರ್‌ಕೆ/ಎಲ್‌ಕ್ಯೂಡಿ/ಸಿಆರ್/121/2013-14 ದಿನಾಂಕ: 28-5-2013

ವಿಷಯ: ಕಾರ್ಯವನ್ನು ನಿರ್ವಹಿಸದೇ ಸ್ಥಗಿತಗೊಂಡಿರುವ ಕ್ಯಾಸಂಬಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ (ನಿ), ಬಂಗಾರಪೇಟೆ ತಾಲ್ಲೂಕು ಈ ಸಂಘವನ್ನು ಸಮಾಪನೆಗೆ ಒಳಪಡಿಸಿ ಸಂಘಕ್ಕೆ ಸಮಾಪನಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ.

ಉಲ್ಲೇಖ: 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕೋಲಾರ ಉಪವಿಭಾಗ, ಕೋಲಾರ ರವರ ಪತ್ರ ಸಂಖ್ಯೆ:ಎಆರ್49/ಸಮಾಪನೆ/ಸಿಆರ್ 143/2013–14 ದಿನಾಂಕ: 14–2–2013.

2) ಈ ಕಛೇರಿಯ ನೋಟೀಸ್ ದಿನಾಂಕ: 5–3–2013.

ಪ್ರಸ್ತಾವನೆ:–

ಕ್ಯಾಸಂಬಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ (ನಿ), ಬಂಗಾರಪೇಟೆ ತಾಲ್ಲೂಕು ಇದು ತನ್ನ ಕಾರ್ಯವನ್ನು ನಿರ್ವಹಿಸದೇ ಸ್ಥಗಿತಗೊಂಡಿರುವುದಾಗಿ ಸಂಘವನ್ನು ಪುನ:ಶ್ಚೇತನಗೊಳಿಸಲು ಸಾಧ್ಯವಿಲ್ಲದಿರುವುದರಿಂದ ಸಮಾಪನೆಗೊಳಿಸಬೇಕೆಂದು ಉಲ್ಲೇಖದ ಪತ್ರದಲ್ಲಿ ಕೋಲಾರ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಶಿಫಾರಸ್ಸು ಮಾಡಿರುತ್ತಾರೆ. ಈ ಕಛೇರಿಯಿಂದ ಉಲ್ಲೇಖ (2) ರಂತೆ ಸಂಘದ ಆಡಳಿತ ಮಂಡಳಿ ಸದಸ್ಯರಿಗೆ ನೋಟೀಸ್ ನೀಡಿ ಸಂಘವನ್ನು ಸಮಾಪನೆಗೊಳಿಸುವ ಬಗ್ಗೆ ಒಂದು ವಾರದೊಳಗಾಗಿ ವಿವರಣೆ/ಹೇಳಿಕೆಯನ್ನು ನೀಡುವಂತೆ ತಿಳಿಸಲಾಗಿತ್ತು. ಅದರಂತೆ ನೋಟೀಸ್ ಜಾರಿ ಮಾಡಲು ಜಾರಿಗಾರರು ಹೋದಾಗ ಈ ಗ್ರಾಮದಲ್ಲಿ ಸದರಿ ಸಂಘವು ಅಸ್ತಿತ್ವದಲ್ಲಿ ಇರುವುದಿಲ್ಲವೆಂದು ತಿಳಿಸಿರುತ್ತಾರೆಂದು ಗ್ರಾಮಸ್ಥರ ಸಮಕ್ಷಮ ಮಹಜರ್ ಪಡೆದು ಸಲ್ಲಿಸಿರುತ್ತಾರೆ.

ಅಲ್ಲದೇ ಕೋಲಾರ ಹಾಲು ಒಕ್ಕೂಟದ ಅಧಿಕಾರಿಗಳು ಸಹ ಪ್ರಸ್ತಾವನೆಯನ್ನು ಪರಿಶೀಲಿಸಿ ಸಂಘವು ತನ್ನ ಬೈಲಾ ರೀತ್ಯಾ ಕಾರ್ಯ ನಿರ್ವಹಿಸದಂತೆ ಸ್ಥಗಿತಗೊಂಡಿದ್ದು, ಈ ಸಂಘವನ್ನು ಮುಂದುವರೆಸುವುದರಿಂದ ಸದಸ್ಯರಿಗೆ ಯಾವುದೇ ಪ್ರಯೋಜನ ಇಲ್ಲದಿರುವುದರಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 72 ರನ್ವಯ ಸಮಾಪನೆಗೊಳಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟಿರುವುದಾಗಿ ತಿಳಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಹಾಗೂ ಕೋಲಾರ ಹಾಲು ಒಕ್ಕೂಟದ ಅಧಿಕಾರಿಗಳ ಮತ್ತು ಕೋಲಾರ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಅಭಿಪ್ರಾಯದಂತೆ ಹಾಗೂ ಶಿಫಾರಸ್ಸು ಮೇರೆಗೆ ಸಂಘವನ್ನು ಸಮಾಪನೆಗೊಳಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಸಂಘಕ್ಕೆ ಸಮಾಪನಾಧಿಕಾರಿಯನ್ನು ನೇಮಕ ಮಾಡಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

:–ಆದೇಶ:–

ಈ ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2)(ಇ) ಅನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಎಂಡಬ್ಲ್ಯೂ/69/ಸಿಎಲ್ಎಂ/2001 ದಿನಾಂಕ: 21–11–2001 ರಂತೆ ದತ್ತವಾದ ಅಧಿಕಾರವನ್ನು ಪ್ರಯೋಗಿಸಿ ಡಿ.ಬಿ.ಲಿಂಗಣ್ಣಯ್ಯ, ಸಹಕಾರ ಸಂಘಗಳ ಉಪನಿಬಂಧಕರು, ಕೋಲಾರ ಜಿಲ್ಲೆ, ಕೋಲಾರ ಆದ ನಾನು ಕ್ಯಾಸಂಬಳ್ಳಿ ಹಾಲು ಉತ್ಪಾದಕರ ಸಂಘ (ನಿ), ಕ್ಯಾಸಂಬಳ್ಳಿ, ಬಂಗಾರಪೇಟೆ ತಾಲ್ಲೂಕು ಈ ಸಂಘವನ್ನು ಸಮಾಪನೆಗೊಳಿಸಿ ಸಂಘಕ್ಕೆ ವಿಸ್ತೀರ್ಣಾಧಿಕಾರಿ, ಕೋಲಾರ–ಚಿಕ್ಕಬಳ್ಳಾಪುರ ಹಾಲು ಒಕ್ಕೂಟ ನಿ., ಬಂಗಾರಪೇಟೆ ಶಿಬಿರ ಕಛೇರಿ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿ ಆದೇಶವನ್ನು ಹೊರಡಿಸಿರುತ್ತೇನೆ.

ಸಂಘದ ಸಮಾಪನಾಧಿಕಾರಿಗಳು ಸಂಘದ ಸಂಪೂರ್ಣ ಪ್ರಭಾರವನ್ನು ಪಡೆದು ಸಂಘದ ಆಸ್ತಿ–ಜವಾಬ್ದಾರಿಗಳನ್ನು 3 ತಿಂಗಳ ಒಳಗಾಗಿ ವಿಲೇವಾರಿ ಮಾಡಿ ಸಂಘದ ನೋಂದಣಿಯನ್ನು ರದ್ದುಪಡಿಸಲು ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿದೆ.

ಈ ಆದೇಶವನ್ನು ನನ್ನ ಸಹಿ ಮತ್ತು ಕಛೇರಿ ಮೊಹರಿನೊಂದಿಗೆ ದಿನಾಂಕ: 28–5–2013 ರಂದು ಹೊರಡಿಸಿದೆ.

ಸಹಕಾರ ಸಂಘಗಳ ಉಪನಿಬಂಧಕರು, ಕೋಲಾರ ಜಿಲ್ಲೆ, ಕೋಲಾರ.

PR.2117
SC.10

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ.

ಕ್ರಮ ಸಂಖ್ಯೆ/ಡಿಆರ್‌ಕೆ/ಎಲ್‌ಕ್ಯೂಡಿ/ಸಿಆರ್.123/2013–14, ದಿನಾಂಕ: 28–5–2013

ವಿಷಯ: ಕಾರ್ಯವನ್ನು ನಿರ್ವಹಿಸದೇ ಸ್ಥಗಿತಗೊಂಡಿರುವ ಹಂಗಳ ಹಾಲು ಉತ್ಪಾದಕರ ಸಹಕಾರ ಸಂಘ (ನಿ), ಬಂಗಾರಪೇಟೆ ತಾಲ್ಲೂಕು ಈ ಸಂಘವನ್ನು ಸಮಾಪನೆಗೆ ಒಳಪಡಿಸಿ ಸಂಘಕ್ಕೆ ಸಮಾಪನಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ.

ಉಲ್ಲೇಖ: 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕೋಲಾರ ಉಪವಿಭಾಗ, ಕೋಲಾರ ರವರ ಪತ್ರ ಸಂಖ್ಯೆ:ಎಆರ್49/ಸಮಾಪನೆ/ಸಿಆರ್ 141/2013–14 ದಿನಾಂಕ: 14–2–2013.

2) ಈ ಕಛೇರಿಯ ನೋಟೀಸ್ ದಿನಾಂಕ: 5–3–2013.

ಪ್ರಸ್ತಾವನೆ:–

ಹಂಗಳ ಹಾಲು ಉತ್ಪಾದಕರ ಸಹಕಾರ ಸಂಘ (ನಿ), ಬಂಗಾರಪೇಟೆ ತಾಲ್ಲೂಕು ಇದು ತನ್ನ ಕಾರ್ಯವನ್ನು ನಿರ್ವಹಿಸದೇ ಸ್ಥಗಿತಗೊಂಡಿರುವುದಾಗಿ ಸಂಘವನ್ನು ಪುನ:ಶ್ಚೇತನಗೊಳಿಸಲು ಸಾಧ್ಯವಿಲ್ಲದಿರುವುದರಿಂದ ಸಮಾಪನೆಗೊಳಿಸಬೇಕೆಂದು ಉಲ್ಲೇಖದ ಪತ್ರದಲ್ಲಿ ಕೋಲಾರ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಶಿಫಾರಸ್ಸು ಮಾಡಿರುತ್ತಾರೆ. ಈ ಕಛೇರಿಯಿಂದ ಉಲ್ಲೇಖ (2) ರಂತೆ ಸಂಘದ ಆಡಳಿತ ಮಂಡಳಿ ಸದಸ್ಯರಿಗೆ ನೋಟೀಸ್ ನೀಡಿ ಸಂಘವನ್ನು ಸಮಾಪನೆಗೊಳಿಸುವ ಬಗ್ಗೆ ಒಂದು ವಾರದೊಳಗಾಗಿ ವಿವರಣೆ/ಹೇಳಿಕೆಯನ್ನು ನೀಡುವಂತೆ ತಿಳಿಸಲಾಗಿತ್ತು. ಅದರಂತೆ ನೋಟೀಸ್ ಜಾರಿ ಮಾಡಲು ಜಾರಿಗಾರರು ಹೋದಾಗ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಲಭ್ಯವಿರುವುದಿಲ್ಲವೆಂದು ಗ್ರಾಮಸ್ಥರಿಂದ ಮಹಜರ್ ಪಡೆದು ಸಲ್ಲಿಸಿರುತ್ತಾರೆ.

ಅಲ್ಲದೇ ಕೋಲಾರ ಹಾಲು ಒಕ್ಕೂಟದ ಅಧಿಕಾರಿಗಳು ಸಹ ಪ್ರಸ್ತಾವನೆಯನ್ನು ಪರಿಶೀಲಿಸಿ ಸಂಘವು ತನ್ನ ಬೈಲಾ ರೀತ್ಯಾ ಕಾರ್ಯ ನಿರ್ವಹಿಸದಂತೆ ಸ್ಥಗಿತಗೊಂಡಿದ್ದು, ಈ ಸಂಘವನ್ನು ಮುಂದುವರೆಸುವುದರಿಂದ ಸದಸ್ಯರಿಗೆ ಯಾವುದೇ ಪ್ರಯೋಜನ ಇಲ್ಲದಿರುವುದರಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 72 ರನ್ವಯ ಸಮಾಪನೆಗೊಳಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟಿರುವುದಾಗಿ ತಿಳಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಹಾಗೂ ಕೋಲಾರ ಹಾಲು ಒಕ್ಕೂಟದ ಅಧಿಕಾರಿಗಳ ಮತ್ತು ಕೋಲಾರ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಅಭಿಪ್ರಾಯದಂತೆ ಹಾಗೂ ಶಿಫಾರಸ್ಸು ಮೇರೆಗೆ ಸಂಘವನ್ನು ಸಮಾಪನೆಗೊಳಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಸಂಘಕ್ಕೆ ಸಮಾಪನಾಧಿಕಾರಿಯನ್ನು ನೇಮಕ ಮಾಡಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

:-ಆದೇಶ:-

ಈ ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2)(ಇ) ಅನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಎಂಡಬ್ಲ್ಯೂ/69/ಸಿಎಲ್ಎಂ/2001 ದಿನಾಂಕ: 21-11-2001 ರಂತೆ ದತ್ತವಾದ ಅಧಿಕಾರವನ್ನು ಪ್ರಯೋಗಿಸಿ ಡಿ.ಬಿ.ಲಿಂಗಣ್ಣಯ್ಯ, ಸಹಕಾರ ಸಂಘಗಳ ಉಪನಿಬಂಧಕರು, ಕೋಲಾರ ಜಿಲ್ಲೆ, ಕೋಲಾರ ಆದ ನಾನು ಹಂಗಳ ಹಾಲು ಉತ್ಪಾದಕರ ಸಂಘ (ನಿ), ಹಂಗಳ, ಬಂಗಾರಪೇಟೆ ತಾಲ್ಲೂಕು ಈ ಸಂಘವನ್ನು ಸಮಾಪನೆಗೊಳಿಸಿ ಸಂಘಕ್ಕೆ ವಿಸ್ತೀರ್ಣಾಧಿಕಾರಿ, ಕೋಲಾರ-ಚಿಕ್ಕಬಳ್ಳಾಪುರ ಹಾಲು ಒಕ್ಕೂಟ ನಿ., ಬಂಗಾರಪೇಟೆ ಶಿಬಿರ ಕಛೇರಿ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿ ಆದೇಶವನ್ನು ಹೊರಡಿಸಿರುತ್ತೇನೆ.

ಸಂಘದ ಸಮಾಪನಾಧಿಕಾರಿಗಳು ಸಂಘದ ಸಂಪೂರ್ಣ ಪ್ರಭಾರವನ್ನು ಪಡೆದು ಸಂಘದ ಆಸ್ತಿ-ಜವಾಬ್ದಾರಿಗಳನ್ನು 3 ತಿಂಗಳ ಒಳಗಾಗಿ ವಿಲೇವಾರಿ ಮಾಡಿ ಸಂಘದ ನೋಂದಣಿಯನ್ನು ರದ್ದುಪಡಿಸಲು ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿದೆ.

ಈ ಆದೇಶವನ್ನು ನನ್ನ ಸಹಿ ಮತ್ತು ಕಛೇರಿ ಮೊಹರಿನೊಂದಿಗೆ ದಿನಾಂಕ: 28-5-2012 ರಂದು ಹೊರಡಿಸಿದೆ.

PR.2113 ಸಹಕಾರ ಸಂಘಗಳ ಉಪನಿಬಂಧಕರು, ಕೋಲಾರ ಜಿಲ್ಲೆ, ಕೋಲಾರ.
SC.10

ಸಹಕಾರ ಇಲಾಖೆ

ಸಹಕಾರ ಸಂಘಗಳ ಉಪ ನಿಬಂಧಕರ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ.

ಕ್ರಮ ಸಂಖ್ಯೆ/ಡಿಆರ್‌ಕೆ/ಎಲ್‌ಕ್ಯೂಡಿ/ಸಿಆರ್.62/2013-14 ದಿನಾಂಕ: 28-5-2013

ವಿಷಯ: ಕಾರ್ಯವನ್ನು ನಿರ್ವಹಿಸದೇ ಸ್ಥಗಿತಗೊಂಡಿರುವ ಯಡಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ (ನಿ), ಮುಳಬಾಗಿಲು ತಾಲ್ಲೂಕು ಈ ಸಂಘವನ್ನು ಸಮಾಪನೆಗೆ ಒಳಪಡಿಸಿ ಸಂಘಕ್ಕೆ ಸಮಾಪನಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ.

ಉಲ್ಲೇಖ: 1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕೋಲಾರ ಉಪವಿಭಾಗ, ಕೋಲಾರ ರವರ ಪತ್ರ ಸಂಖ್ಯೆ:ಎಆರ್49/ಸಮಾಪನೆ/ಸಿಆರ್ 62/2013-14 ದಿನಾಂಕ: 5-3-2013..

2) ಈ ಕಛೇರಿಯ ನೋಟೀಸ್ ದಿನಾಂಕ: 5-3-2013.

ಪ್ರಸ್ತಾವನೆ:-

ಯಡಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ (ನಿ), ಮುಳಬಾಗಿಲು ತಾಲ್ಲೂಕು ಇದು ತನ್ನ ಕಾರ್ಯವನ್ನು ನಿರ್ವಹಿಸದೇ ಸ್ಥಗಿತಗೊಂಡಿರುವುದಾಗಿ ಸಂಘವನ್ನು ಪುನ:ಶ್ಚೇತನಗೊಳಿಸಲು ಸಾಧ್ಯವಿಲ್ಲದಿರುವುದರಿಂದ ಸಮಾಪನೆಗೊಳಿಸಬೇಕೆಂದು ಉಲ್ಲೇಖದ ಪತ್ರದಲ್ಲಿ ಕೋಲಾರ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಶಿಫಾರಸ್ಸು ಮಾಡಿರುತ್ತಾರೆ. ಈ ಕಛೇರಿಯಿಂದ ಉಲ್ಲೇಖ (2) ರಂತೆ ಸಂಘದ ಆಡಳಿತ ಮಂಡಳಿ ಸದಸ್ಯರಿಗೆ ನೋಟೀಸ್ ನೀಡಿ ಸಂಘವನ್ನು ಸಮಾಪನೆಗೊಳಿಸುವ ಬಗ್ಗೆ ಒಂದು ವಾರದೊಳಗಾಗಿ ವಿವರಣೆ/ಹೇಳಿಕೆಯನ್ನು ನೀಡುವಂತೆ ತಿಳಿಸಲಾಗಿತ್ತು. ಅದರಂತೆ ನೋಟೀಸ್ ಜಾರಿ ಮಾಡಲು ಜಾರಿಗಾರರು ಸದರಿ ಗ್ರಾಮಕ್ಕೆ ಭೇಟಿ ನೀಡಿ ವಿಚಾರಿಸಲಾಗಿ ಯಾವುದೇ ಸದಸ್ಯರು ಈ ಗ್ರಾಮಕ್ಕೆ ಸಂಬಂಧಪಟ್ಟಿರುವುದಿಲ್ಲವೆಂದು ತಿಳಿಸಿರುತ್ತಾರೆ. ಊರಿನ ಗ್ರಾಮಸ್ಥರು ಸಹಿ ಮಾಡಿರುತ್ತಾರೆ. ಅಲ್ಲದೇ ಕೋಲಾರ ಹಾಲು ಒಕ್ಕೂಟದ ಅಧಿಕಾರಿಗಳು ಸಹ ಪ್ರಸ್ತಾವನೆಯನ್ನು ಪರಿಶೀಲಿಸಿ ಸಂಘವು ತನ್ನ ಬೈಲಾ ರೀತ್ಯಾ ಕಾರ್ಯ ನಿರ್ವಹಿಸದಂತೆ ಸ್ಥಗಿತಗೊಂಡಿದ್ದು, ಈ ಸಂಘವನ್ನು ಮುಂದುವರೆಸುವುದರಿಂದ ಸದಸ್ಯರಿಗೆ ಯಾವುದೇ ಪ್ರಯೋಜನ ಇಲ್ಲದಿರುವುದರಿಂದ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 72 ರನ್ವಯ ಸಮಾಪನೆಗೊಳಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟಿರುವುದಾಗಿ ತಿಳಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಹಾಗೂ ಕೋಲಾರ ಹಾಲು ಒಕ್ಕೂಟದ ಅಧಿಕಾರಿಗಳ ಮತ್ತು ಕೋಲಾರ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಅಭಿಪ್ರಾಯದಂತೆ ಹಾಗೂ ಶಿಫಾರಸ್ಸು ಮೇರೆಗೆ ಸಂಘವನ್ನು ಸಮಾಪನೆಗೊಳಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಸಂಘಕ್ಕೆ ಸಮಾಪನಾಧಿಕಾರಿಯನ್ನು ನೇಮಕ ಮಾಡಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

:-ಆದೇಶ:-

ಈ ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 72(2)(ಇ) ಅನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಎಂಡಬ್ಲ್ಯೂ/69/ಸಿಎಲ್ಎಂ/2001 ದಿನಾಂಕ: 21-11-2001 ರಂತೆ ದತ್ತವಾದ ಅಧಿಕಾರವನ್ನು ಪ್ರಯೋಗಿಸಿ ಡಿ.ಬಿ.ಲಿಂಗಣ್ಣಯ್ಯ, ಸಹಕಾರ ಸಂಘಗಳ ಉಪನಿಬಂಧಕರು, ಕೋಲಾರ ಜಿಲ್ಲೆ, ಕೋಲಾರ ಆದ ನಾನು ಯಡಹಳ್ಳಿ ಹಾಲು ಉತ್ಪಾದಕರ ಸಂಘ (ನಿ), ಯಡಹಳ್ಳಿ, ಬಂಗಾರಪೇಟೆ ತಾಲ್ಲೂಕು ಈ ಸಂಘವನ್ನು ಸಮಾಪನೆಗೊಳಿಸಿ ಸಂಘಕ್ಕೆ ವಿಸ್ತೀರ್ಣಾಧಿಕಾರಿ, ಕೋಲಾರ-ಚಿಕ್ಕಬಳ್ಳಾಪುರ ಹಾಲು ಒಕ್ಕೂಟ ನಿ., ಮುಳಬಾಗಿಲು ಶಿಬಿರ ಕಛೇರಿ ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿ ಆದೇಶವನ್ನು ಹೊರಡಿಸಿರುತ್ತೇನೆ.

ಸಂಘದ ಸಮಾಪನಾಧಿಕಾರಿಗಳು ಸಂಘದ ಸಂಪೂರ್ಣ ಪ್ರಭಾರವನ್ನು ಪಡೆದು ಸಂಘದ ಆಸ್ತಿ-ಜವಾಬ್ದಾರಿಗಳನ್ನು 3 ತಿಂಗಳ ಒಳಗಾಗಿ ವಿಲೇವಾರಿ ಮಾಡಿ ಸಂಘದ ನೋಂದಣಿಯನ್ನು ರದ್ದುಪಡಿಸಲು ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿದೆ.

ಈ ಆದೇಶವನ್ನು ನನ್ನ ಸಹಿ ಮತ್ತು ಕಛೇರಿ ಮೊಹರಿನೊಂದಿಗೆ ದಿನಾಂಕ: 28-5-2013 ರಂದು ಹೊರಡಿಸಿದೆ.

PR.2119 ಸಹಕಾರ ಸಂಘಗಳ ಉಪನಿಬಂಧಕರು, ಕೋಲಾರ ಜಿಲ್ಲೆ, ಕೋಲಾರ.
SC.10

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು–577101

Office of the Deputy Commissioner, Chikmagalur District, Chikmagalur-577101, Karnataka

ಸಂ: ಕ.ಗ ಸಿಆರ್/ಜಲ್ಲಿ ಕ್ರಷರ್/ಅಧಿಸೂಚನೆ/2013–14/85, ದಿನಾಂಕ: 05–09–2013

ಅಧಿಸೂಚನೆ

ವಿಷಯ: ಕರ್ನಾಟಕ ಕಲ್ಲು ಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧಿನಿಯಮ– 2011 ರನ್ವಯ ಕಲ್ಲುಪುಡಿ ಮಾಡುವ ಘಟಕಗಳಿಗೆ ಸುರಕ್ಷಿತ ವಲಯದ ಘೋಷಣೆಯ ಬಗ್ಗೆ ಅಧಿಸೂಚನೆ ಕುರಿತು.

ಉಲ್ಲೇಖ:
1. ದಿನಾಂಕ: 31.07.2013 ರಂದು ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಸಮಿತಿ ಸಭೆಯ ನಡವಳಿಗಳು.
2. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪತ್ರ ಸಂ: 351–355/PCB/MIN/ 2013–14/2295 ದಿನಾಂಕ: 30.08.2013.
3. ಕ.ಗ.ಸಿ.ಆರ್/ಜಲ್ಲಿ ಕ್ರಷರ್ ಅಧಿಸೂಚನೆ 2012–13 ದಿನಾಂಕ: 11.10.2012.

1. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ 2011 ರ ಕಲಂ 6(4) ರಂತೆ ಲೈಸೆನ್ಸಿಂಗ್ ಪ್ರಾಧಿಕಾರವು ಸುರಕ್ಷಿತ ವಲಯಗಳನ್ನು ಗುರುತಿಸಿ, ಅಧಿಸೂಚನೆ ಹೊರಡಿಸಬೇಕಾಗಿರುತ್ತದೆ.
2. ಅದರಂತೆ ಉಲ್ಲೇಖ (1) ರಲ್ಲಿನ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ನಡವಳಿಯಂತೆ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕಿನ 05 ಮತ್ತು ಕಡೂರು ತಾಲ್ಲೂಕಿನ 01 ಮತ್ತು ನರಸಿಂಹರಾಜಪುರ ತಾಲ್ಲೂಕಿನ 01 ಕಲ್ಲು ಪುಡಿ ಮಾಡುವ ಘಟಕಗಳ ಸ್ಥಾಪನೆಗೆ ಸುರಕ್ಷಿತ ವಲಯಗಳೆಂದು ಘೋಷಣೆ ಮಾಡಲು ತೀರ್ಮಾನಿಸಲಾಗಿರುತ್ತದೆ.
3. ಮೇಲಿನ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಸಮಿತಿಯ ತೀರ್ಮಾನದಂತೆ ಸುರಕ್ಷಿತ ವಲಯಗಳನ್ನು ಘೋಷಣೆ ಮಾಡುವ ಕುರಿತಾದ ಅಧಿಸೂಚನೆಯ ಪ್ರಸ್ತಾವನೆಯನ್ನು ಉಲ್ಲೇಖ (2) ರಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಕಲಂ 6(5) ರಡಿ ಕೆಲವು ನಿಬಂಧನೆಗಳನ್ನು ವಿಧಿಸಿ ದೃಢೀಕರಿಸಿರುತ್ತದೆ.
4. ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ 2011 ರಡಿ ಕಲ್ಲುಪುಡಿ ಮಾಡುವ ಘಟಕಗಳನ್ನು ಸ್ಥಾಪಿಸಲು ಈ ಕೆಳಕಾಣಿಸಿದ ಪ್ರದೇಶವನ್ನು ಸುರಕ್ಷಿತ ವಲಯಗಳೆಂದು ಈ ಮೂಲಕ ಘೋಷಿಸಲಾಗಿರುತ್ತದೆ.

ಕ್ರ.ಸಂ	ತಾಲ್ಲೂಕು	ಗ್ರಾಮ	ಸ.ನಂ	ವಿಸ್ತೀರ್ಣ (ಎಕರೆಗಳಲ್ಲಿ	ಜಮೀನಿನ ವರ್ಗೀಕರಣ
1	ಚಿಕ್ಕಮಗಳೂರು	ಮರ್ಲೆ	377	5	ಪಟ್ಟಾ ಜಮೀನು
2	ಚಿಕ್ಕಮಗಳೂರು	ನಂದಿಕೆರೆ	95	5	ಪಟ್ಟಾ ಜಮೀನು
3	ಚಿಕ್ಕಮಗಳೂರು	ನಂದಿಕೆರೆ	28	5	ಪಟ್ಟಾ ಜಮೀನು
4	ಚಿಕ್ಕಮಗಳೂರು	ಮತ್ತಾವರ ಮತ್ತು ನಲ್ಲೂರು	103/2, 103/4, 220ಪಿ1ಪಿ2, 219/2ಎ & 219/2ಬಿ	6.03	ಪಟ್ಟಾ ಜಮೀನು
5	ಚಿಕ್ಕಮಗಳೂರು	ವಸ್ತಾರೆ	93, 94, 95 & 96	5	ಪಟ್ಟಾ ಜಮೀನು
6	ಕಡೂರು	ನಗದಿಯಾತ್ ಕಾವಲ್	13ಪಿ	5	ಪಟ್ಟಾ ಜಮೀನು
7	ನರಸಿಂಹರಾಜಪುರ	ಕೋಣನಕೆರೆ	104/1, 110/3, 110/5, & 110/6	5.39	ಪಟ್ಟಾ ಜಮೀನು

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ವಿಧಿಸಿರುವ ಷರತ್ತುಗಳು ಈ ಕೆಳಕಂಡಂತಿರುತ್ತದೆ.

1. A buffer zone of no development shall be maintained.
2. Action shall be initiated to construct an appropriate boundary wall around it and there shall be planting of tall growing foliage bearing perennial trees all along the boundaries. At least five such rows of tall growing leafy trees shall form a curtain to the surrounding area so that there in no escape of dust particles to its surrounding limits.
3. Link roads and internal roads within the sager zone shall be properly metalled within one year and maintained so that fugitive emissions are reduced. The ambient air quality in the safer zone shall conform to the National Ambient Air Quality Standards as specified in Environment (Protection) Seventh Amendment Rules 2009.
4. The entire area shall have a planned rain water harvesting system over a period of 3 years so that the location is self reliant as for as water requirement is concerned.
5. This certification is subject to any judgment / s of the Hon'ble Supreme Court or Hon'ble High Court or any other courts that may be pronounced from time to time in the said matter of safer zone.

This Notification is subject to the conditions of the Karnataka Regulation of Stone Crusher Act, 2011 and Rules, 2012.

ಜಿಲ್ಲಾಧಿಕಾರಿ
ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳ್ರರು

PR.2162

ಸರ್ಕಾರಿ ಕೇಂದ್ರ ಮುದ್ರಣಾಲಯ, ಘಟಕ–2, ಬೆಂಗಳೂರು